ಅಧ್ಯಕ್ಷರು : ರೋಷನ್‌ಬೇಗ್‌ರವರೇ, ಮಾನ್ಯ ಸದಸ್ಯರ ಕಂಪ್ಲೇಂಟ್ ಇಷ್ಟೆ. ಅವರೆಲ್ಲರೂ ಹತ್ತಿರದ ಸಂಬಂಧಿಕರು ಮತ್ತು ಒಂದೇ ಸಮಾಜಕ್ಕೆ ಸೇರಿದವರು. ಇವರು ಬಡವರು ಎಂಬ ಕಾರಣಕ್ಕಾಗಿ ಆ ಹುಣ್ಣಿಮೆಗಳನ್ನು ಒಂದು ಕಾಲದಲ್ಲಿ ಸಮೀಪ ಇದ್ದರೂ ಕೂಡ ಈಗ ಲಗ್ನ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಾ ಇಲ್ಲ. ಅವನು ಮಿಸ್ಸಿಂಗ್ ಎಂದು ಕೂಡ ಹೇಳುತ್ತಿದಾರೆ. ನಿಮ್ಮ ಆಫೀಸರ್ಸ್‌ಗೆ ಕರೆಸಿ ಮಾತನಾಡಿ ಸ್ವಲ್ಪ ಜಬರ್‌ದಸ್ತಿ ಮಾಡಿ ಅವರ ಮನೆಯವರೆಲ್ಲರನ್ನೂ ಕರೆಸಿಕೊಂಡು ಕೂಡಿಸಿಕೊಂಡು ಮಾತನಾಡಿದಿರೆ ಎಲ್ಲಾ ಸೆಟ್ಲ್ ಆಗುತ್ತದೆ. ಏನೂ ತೊಂದರೆಯಾಗುವುದಿಲ್ಲ.

ಶ್ರೀ ರೋಷನ್ ಬೇಗ್ (ಗೃಹಸಚಿವರು) : ಮಾನ್ಯ ಅಧ್ಯಕ್ಷರೇ, ನಾಳೆ ಹೌಸ್‌ಮೀಟ್ ಮಾಡುವುದರೊಳಗೆ ಈ ಬಗ್ಗೆ ಒಂದು ಸುದ್ಧಿಯನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಶ್ರೀರಾಮರೆಡ್ಡಿಯವರು, ಜಯಚಂದ್ರರವರು, ಮುನಿಯಪ್ಪನವರು, ಇವರೆಲ್ಲರೂ ಸೇರಿ ಟೊಮೇಟೋ ವಿಷಯವನ್ನು ಹೇಳಿದ್ದಾರೆ. ಈಗ ಚರ್ಚೆಯನ್ನು ಯಾರಾದರೂ ಒಬ್ಬರು ಪ್ರಾರಂಭ ಮಾಡಬೇಕು. ಮೊದಲನೇ ಬೆಂಚ್‌ನಲ್ಲಿದ್ದವರಿಗೆ ಅವಕಾಶವು ಸಿಗುತ್ತಾ ಇರುತ್ತದೆ. ಆದ್ದರಿಂದ ಅಪರೂಪಕ್ಕೆ ಮುನಿಯಪ್ಪನವರು ಮಾತನಾಡಲಿ.

ಕೋಲಾರ ಜಿಲ್ಲೆಯಲ್ಲಿ ಟೋಮೇಟೋ ಬೆಳೆಗಾರ ಧಾರುಣ ಪರಿಸ್ಥಿತಿ

+ ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಸನ್ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿನ ಟೋಮೇಟೋ ಬೆಳೆಗಾರರ ಒಂದು ಧಾರುಣ ಸ್ಥಿತಿಯನ್ನು ಕುರಿತು ಪತ್ರಿಕೆಗಳಲ್ಲಿ ಬಂದಿರುವುದನ್ನು ಈಗಾಗಲೇ ನೋಡಿದ್ದೀರಿ. ಮೇಲ್ಮನೆಯಲ್ಲಿ ಕೂಡ ಇದರ ಬಗ್ಗೆ ಪ್ರಸ್ತಾಪವಾಗಿದೆ. ಚಿಂತಾಮಣಿಯಲ್ಲಿ ನಡೆದ ಘಟನೆ ಮತ್ತು ತದನಂತರ ಕಳೆದ ಶನಿವಾರ ಕೋಲಾರದಲ್ಲಿ ರೈತರು ಟೋಮೇಟೋವನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದಾಗ, ಮಾರುಕಟ್ಟೆಯನ್ನು ಹೇಳುವವರು ಕೇಳುವವರು ಇಲ್ಲದೆ ಅನಾಥರಾಗಿ ಕಡೆಗೆ ರೊಚ್ಚಿಗೆದ್ದು ರೈತರು ಅನಿವಾರ್ಯವಾಗಿ ತಂದು ಹೆದ್ದಾರಿಗೆ ನೂರಾರು ಟನ್‌ಗಳಷ್ಟು ಟೊಮೇಟೊವನ್ನು ಸುರಿದಿದ್ದನ್ನು ಪತ್ರಿಕೆಗಳಲ್ಲಿ ಎಲ್ಲರೂ ಓದಿದ್ದಾರೆ. ಕೋಲಾರ ಜಿಲ್ಲೆಯ ಸಂಪೂರ್ಣವಾದಂಥ ನೈಜಚಿತ್ರವು ತಮ್ಮ ಅನುಭವದಲ್ಲಿದೆ. ತಾವುಗಳು ಆ ಜಿಲ್ಲೆಯಲ್ಲಿ ಇಂಥ ಸಮಸ್ಯೆಗಳನ್ನು ಖುದ್ದಾಗಿ ಅನುಭವಿಸತಕ್ಕಂಥವರು. ಬಹುಶಃ 400-500 ಅಡಿಗಳಷ್ಟು ಅಂತರ್ಜಲವನ್ನು ರೈತರು ಹೊರತೆಗೆದು, ಕೇವಲ ದಿನದಲ್ಲಿ 6 ಗಂಟೆಗಳ ಕಾಲ ನಮಗೆ ಸಿಗತಕ್ಕಂಥ ವಿದ್ಯುತ್‌ನ್ನು ಉಪಯೋಗಿಸಿ, ನೂರಾರು ಟನ್‌ಗಳಷ್ಟು ಟೊಮೇಟೊವನ್ನು ಬೆಳೆದು ಅದಕ್ಕೆ ಬೆಲೆ ಬರಲಿಲ್ಲ ಎಂದು ಅನಿವಾರ್ಯ ಪರಿಸ್ಥಿತಿಯಲ್ಲಿ ಒಂದು ಧಾರುಣವಾದಂಥ ಪರಿಸ್ಥಿತಿಯಲ್ಲಿ ಇದುವರೆಗೆ ರಾಜ್ಯದಲ್ಲಿ ನಮ್ಮ ರೈತರು ಬಂದಿಲ್ಲ ಎಂದು ಕಾಣುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸರಕಾರವು ಎಷ್ಟರಮಟ್ಟಿಗೆ ಸ್ಪಂಧಿಸಿದೆ? ರೈತರ ಬಗ್ಗೆ ಎಷ್ಟು ಕಳಕಳಿಯನ್ನು ಹೊಂದಿದೆ? ಎನ್ನತಕ್ಕಂಥ ವಿಚಾರವನ್ನು ನಾವು ಯೋಚನೆ ಮಾಡಿ ನೋಡಿದರೆ, ಬಹುಶಃ ರೈತರ ಬಗ್ಗೆ ಎಳ್ಳಷ್ಟೂ ಕಾಳಜಿಯನ್ನು ಇವರು ವಹಿಸಿಲ್ಲ ಎಂದು ಹೇಳಬೇಕಾಗುತ್ತದೆ. ಎಪಿಎಂಸಿ ಯವರನ್ನು ಕರೆದು ಕನಿಷ್ಟಪಕ್ಷ ಹೊರರಾಜ್ಯಗಳಲ್ಲಿ ಎಲ್ಲೆಲ್ಲಿ ಇದಕ್ಕೆ ಮಾರುಕಟ್ಟೆ ಇದೆ

ಎಂಬುದನ್ನು ನೋಡಿ, ಯಾವರೀತಿಯಾಗಿ ಈ ಬೆಳೆಗೆ ಮಾರುಕಟ್ಟೆ ಮಾಡಲು ಸಾಧ್ಯ ಎಂಬುದನ್ನು ವಿಚಾರ ಮಾಡಲು ಕನಿಷ್ಟ ಇಲಾಖಾ ಅಧಿಕಾರಿಗಳಾಗಲೀ, ಅಥವಾ ಸಂಬಂಧಪಟ್ಟ ಮಂತ್ರಿಗಳಾಗಲೀ ಯಾರೂ ಕೂಡ ರೈತರನ್ನು ಕರೆದು ವಿಚಾರ ಮಾಡಿಲ್ಲ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ, ನಮ್ಮ ಜಲ್ಲೆಯಲ್ಲಿ ಯಾವುದೇ ನದಿ, ನಾಲೆಗಳು ಇಲ್ಲ. ಸಂಪೂರ್ಣವಾಗಿ ಮಳೆಯನ್ನು ಅವಲಂಭಿಸಿ ಅಂತರ್ಜಲವನ್ನು ತೆಗೆದು ನಾವು ಜೀವನ ಮಾಡತಕ್ಕಂಥ ಪರಿಸ್ಥಿತಿಯಲ್ಲಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಬೆಳೆದಂಥ ನೂರಾರು ಟನ್‌ಗಳಷ್ಟು ಟೊಮೇಟೊವನ್ನು ಬೀದಿಗೆ ಚೆಲ್ಲಿ ನೋಡುತ್ತಾ ಇದ್ದಾರೆ ಅಂದರೆ ಬಹುಶಃ ಇದಕ್ಕಿಂತ ಅನ್ಯಾಯ ಮತ್ತು ಧಾರುಣವಾದಂಥ ಪರಿಸ್ಥಿತಿಯು ಈ ವ್ಯವಸಾಯದ ಮತ್ತು ಹಾರ್ಟಿಕಲ್ಚರ್ ಹಿಸ್ಟರಿಯಲ್ಲಿಯೇ ಇಲ್ಲ ಎಂದು ಹೇಳಬೇಕಾಗುತ್ತದೆ. ಇಂಥ ಒಂದು ಸ್ಥಿತಿಯಲ್ಲಿ ನಮ್ಮ ಜಿಲ್ಲೆಯವರೇ ಆದಂಥ ಮಾನ್ಯ ವ್ಯವಸಾಯ ಮಂತ್ರಿಯವರು ಆವೊತ್ತು ಯಾವುದೋ ಕಾರಣಾಂತರಗಳಿಂದ ಟ್ರಕ್ಸ್ ಸ್ಟ್ರೈಕ್ ಆಗಿ ಬೆಲೆ ಕುಸಿದಾಗ ರೈತರ ಬೆಳೆಗಳನ್ನು ವಿಧಾನಸೌಧದ ಮುಂದೆ ತಂದು ಸುರಿದಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಆವೊತ್ತು ರೈತರಿಗೆ ಬೆಂಬಲವಾದ ಬೆಲೆಯನ್ನು ಕೊಡಬೇಕೆಂಬ ಮಾತನ್ನು ಅವರು ಆಡಿದ್ದಾರೆ. ಸರಕಾರದ ಮೇಲೆ ಒತ್ತಾಯವನ್ನು ತಂದಿದ್ದಾರೆ. ಅದೃಷ್ಟವಶಾತ್ ಅದೇ ನಾಯಕರು ಇವೊತ್ತು ಸರಕಾರದ ವ್ಯವಸಾಯ ಸಚಿವರಾಗಿ ಅಧಿಕಾರದಲ್ಲಿದ್ದಾರೆ. ಆದರೆ ಇವೊತ್ತು ಇಂಥ ಪರಿಸ್ಥಿತಿಯಲ್ಲಿ ಈ ವ್ಯವಸಾಯಗಾರರಿಗೆ ಏನು ಬೆಂಬಲ ಬೆಲೆಯನ್ನು ಕೊಡುವ ಮೂಲಕ ಆಗಿರತಕ್ಕಂಥ ನಷ್ಟವನ್ನು ಸ್ವಲ್ಪಮಟ್ಟಿಗೆ ಸರಕಾರದಿಂದ ತುಂಬಿಕೊಡತಕ್ಕಂಥ ಕೆಲಸವನ್ನು ಏನು ಮಾಡಬೇಕಾಗಿತ್ತೋ ಅದನ್ನು ಬಹುಶಃ ಇಲ್ಲಿಯವರೆಗೂ ಅವರು ಮಾಡಲಿಲ್ಲ, ಅವರು ಗಮನ ಹರಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ನಮಗೆ ತಿಳಿದಿಲ್ಲ. ಆದುದರಿಂದ ನಾವು ಸರಕಾರದಿಂದ ನಿರೀಕ್ಷೆ ಮಾಡುತ್ತೇವೆ. ಈ ಟೋಮೇಟೋ ಬೆಳೆಗಾರರಿಗೆ ಬೆಂಬಲ ಬೆಲೆಯನ್ನು ಕೊಡಬೇಕು. ಬಹುಶಃ ಕಳೆದ ಒಂದು ವರ್ಷದಿಂದ ಬೇರೆ ತರಕಾರಿಗಳ ಬಗ್ಗೆಯೂ ನನ್ನ ಪತ್ರದಲ್ಲಿ ಪ್ರಸ್ತಾಪ ಮಾಡಿದ್ದೆ. ಕಳೆದ ಒಂದು ವರ್ಷದಿಂದ ಆಲೂಗಡ್ಡೆ ಬೆಳೆಗಾರರು ಇಂಥ ಒಂದು ದುಸ್ಥಿತಿಯನ್ನು ಕಂಡಿದ್ದಾರೆ. ಅವರ ಜೀವನದಲ್ಲಿಯೇ ಕಂಡಿರಲಿಲ್ಲ. ಅದರಂತೆ ಈರುಳ್ಳಿ ಬೆಳೆಗಾರರು ಕೂಡ ಅಷ್ಟೇ ಕಷ್ಟದಲ್ಲಿದ್ದಾರೆ. ಈರುಳ್ಳಿ ಬೆಳೆಗಾರರಿಗೆ ಒಂದು ಕಡೆ ಮಜ್ಜಿಗೆ ರೋಗ, ಅದನ್ನು ನಿಯಂತ್ರಿಸಲು ವ್ಯವಸಾಯ ಇಲಾಖೆಯು ಎಲ್ಲಿದೆಯೋ ಗೊತ್ತಿಲ್ಲ. ಮಜ್ಜಿಗೆ ರೋಗ ತಗುಲಿ ಅರ್ಧ ಹಾಳಾಗಿ ಹೋಯಿತು. ಅಂತೆಯೇ ಉಳಿದಂಥ ಈರುಳ್ಳಿಗೆ ಕನಿಷ್ಠ ಮಾರುಕಟ್ಟೆ ಬೆಲೆ ಕೂಡ ಇಲ್ಲ. ಮೊದಲು ವ್ಯವಸ್ಥಿತವಾಗಿ ಎಕ್ಸ್‌ಪೋರ್ಟ್ ಮಾಡತಕ್ಕಂಥ ಮಾರುಕಟ್ಟೆ ವ್ಯವಸ್ಥೆ ಏನಿತ್ತು, ಕಳೆದ ಮೂರು ತಿಂಗಳುಗಳಿಂದ ಅದನ್ನು ಕೇಳುವವರಿಲ್ಲ. ಏನೋ ಇತ್ತೀಚಿಗೆ ಸ್ವಲ್ಪ ಸುಧಾರಿಸಿಕೊಂಡಿದೆ ಎನ್ನುವ ಮಾತನ್ನು ಕೇಳಿದ್ದೇನೆ. ಹೀಗೆ ಈರುಳ್ಳಿಯಲ್ಲಿ ನಷ್ಟವಾಗಿದೆ ಆದರೆ ಆಲೂಗಡ್ಡೆಯವರು ಇನ್ನೂ ಚೇತರಿಸಿಕೊಂಡಿಲ್ಲ. 65 ಕೆಜಿಯ ಒಂದು ಮೂಟೆ ಬೀಜದ ಆಲೂಗಡ್ಡೆಯವರು 2400 ರೂ.ಗಳನ್ನು ಕೊಟ್ಟು ಕೊಂಡಿದ್ದಾರೆ ನಮ್ಮ ರೈತರು. ಇವೊತ್ತು ಬೆಳೆದ ಗಡ್ಡೆಯನ್ನು 100-ರಿಂದ 200 ರೂ.ಗಳಿಗೆ 50 ಕೆಜಿಯನ್ನು ಮಾರುತ್ತಾ ಇದ್ದಾರೆ. ಲೆಕ್ಕಹಾಕಿದರೆ ಒಂದು ಮೂಟೆ ಆಲೂಗಡ್ಡೆ ಬೆಳೆಯ ಬೇಕಾದರೆ ಕನಿಷ್ಟ 200 ರೂ.ಗಳು ಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಅದನ್ನು ಬೆಳೆಯಲು 150 ರಿಂದ 200ರೂ.ಗಳ ವರೆಗೆ ಖರ್ಚು ಬೇಕಾಗುತ್ತದೆ. ಅದಕ್ಕೆ ಬೇಕಾದಂಥ

ರಾಸಾಯನಿಕ ಗೊಬ್ಬರಗಳು, ವ್ಯವಸಾಯದ ಉಪಕರಣಗಳು, ಔಷಧಿಗಳು, ಕೂಲಿ ಎಲ್ಲಾ ಸೇರಿ ಅಷ್ಟು ಖರ್ಚು ಬರುತ್ತದೆ. ಇಷ್ಟೆಲ್ಲಾ ಖರ್ಚು ಮಾಡಿದರೂ ಕೂಡ ಅವನಿಗೆ ಮೂಟೆಗೆ 100-150ರೂ .ಗಳು ಬಂದರೆ ರೈತರು ಏನು ಮಾಡಬೇಕು? ಸಂಪೂರ್ಣವಾಗಿ ನಷ್ಟ ಹೊಂದಿದ್ದಾನೆ. ಮುಂದೆ ಯಾವುದೇ ಕಾರಣಕ್ಕಾಗಿ ಬೆಳೆ ಚೆನ್ನಾಗಿ ಬಂದರೂ ಕೂಡ, ಬೆಲೆ ಬಂದರೂ ಕೂಡ ರೈತರು ಸುಧಾರಿಸಿಕೊಳ್ಳತಕ್ಕಂಥ ಸ್ಥಿತಿಯಲ್ಲಿಲ್ಲ. ಇಂಥ ಒಂದು ಕ್ಲಿಷ್ಟಪರಿಸ್ಥಿತಿಯಲ್ಲಿಯೂ ಸರಕಾರವು ರೈತರ ಪರವಾಗಿ ಸ್ಪಂಧಿಸಿಲ್ಲ ಎಂದು ಹೇಳುತ್ತೇನೆ. ಇಂಥ ಒಂದು ಕ್ಲಿಷ್ಟ ಮತ್ತು ಧಾರುಣವಾದಂಥ ಪರಿಸ್ಥಿತಿಯಲ್ಲಿ, ಹೆದ್ದಾರಿಗೆ ನೂರಾರು ಟನ್‌ಗಳಷ್ಟು ಟೊಮೇಟೋವನ್ನು ಸುರಿದಿರತಕ್ಕಂಥ ಪರಿಸ್ಥಿತಿಯಲ್ಲಿ, ರೈತರು ಇವೊತ್ತು ಬಹಳ ದುಸ್ಥಿತಿಯಲ್ಲಿದ್ದಾರೆ. ಅವರನ್ನು ಹೇಳುವವರು ಕೇಳುವವರು ಇಲ್ಲದಾಗಿದ್ದಾರೆ. ಇವೊತ್ತು ತೋಟಗಳಲ್ಲಿಯೇ ಟೊಮೇಟೋ ಹಣ್ಣುಗಳು ಉದುರುತ್ತಾ ಇವೆ. ಇಂಥ ಪರಿಸ್ಥಿತಿಯಲ್ಲಿ ಸರಕಾರವು ಇವರ ಸಹಾಯಕ್ಕೆ ಬರಲೇ ಬೇಕಾಗಿದೆ. ಇವತ್ತೊ ಕನಿಷ್ಟ 15 ರಿಂದ 20 ಸಾವಿರ ರೂ.ಗಳ ವರೆಗೆ ಒಂದು ಎಕರೆಯಲ್ಲಿ ಟೊಮೇಟೋವನ್ನು ಬೆಳೆಯಲು ಬೇಕಾಗಿದೆ. ಅವರಿಗೆ ಕನಿಷ್ಟ ಒಂದೂವರೆ ರೂ.ಗಳಿಗೆ ಕೆಜಿ ಬೆಲೆ ಸಿಕ್ಕಿದರೂ ಕೂಡ 10-15 ಸಾವಿರ ರೂ.ಗಳನ್ನು ಪಡೆದುಕೊಳ್ಳುತ್ತಾ ಇದ್ದರು. ಈ ಲಾಭಾಂಶವು ಇವರಿಗೆ ಸಂಪೂರ್ಣವಾಗಿ ಹೋಗಿಬಿಟ್ಟಿದೆ. ಅವರು ಸಂಪೂರ್ಣವಾಗಿ ನಷ್ಟಕ್ಕೊಳಗಾಗಿದ್ದಾರೆ. ಇವೊತ್ತು ಅವರಿಗೆ 10 ರಿಂದ 15 ಸಾವಿರ ರೂ.ಗಳ ವರೆಗಾದರೂ ಅವರಿಗೆ ಬೆಂಬಲಿತ ಬೆಲೆಯನ್ನು ಕೊಡದೇ ಹೋದರೆ ಅವರು ಇನ್ನು ಮುಂದೆ ಸುಧಾರಿಸಿಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಬೆಳೆಗಾಗಿ ಸಾಲ ಮಾಡಿದ ಹಣವನ್ನು ಹಾಕಿದ್ದಾರೆ. ಈ ಪರಿಸ್ಥಿತಿಯಲ್ಲಿ ಸರಕಾರದವರು ತಮ್ಮ ಗಮನವನ್ನು ಹರಿಸಬೇಕಾಗಿದೆ. ಬಹುಶಃ ಈಗಿನ ವ್ಯವಸಾಯ ಸಚಿವರು ಈ ಹಿಂದೆ ಇಂಥ ಪರಿಸ್ಥಿತಿಯು ಬಂದಾಗ ತಾವೇ ಪರಿಸ್ಥಿತಿಯನ್ನು ಸರಕಾರಕ್ಕೆ ಮನದಟ್ಟು ಮಾಡಿಕೊಟ್ಟಿದ್ದರು. ಆಗ ಅವರು ನಾನು ರಾಜಕೀಯ ಮಾಡಿಲ್ಲ, ರೈತರುಗಳಿಗೆ ಇರತಕ್ಕಂಥ ಸಮಸ್ಯೆಗಳನ್ನು ಕಷ್ಟಗಳನ್ನು ನಾನು ಸರಕಾರಕ್ಕೆ ಒತ್ತಾಯ ಮಾಡಿದ್ದೇನೆ ಎಂಬ ಮಾತನ್ನು ಹೇಳಿದ್ದರು. ನಿಜವಾದ ಕಳಕಳಿಯು ಅವರಲ್ಲಿದ್ದರೆ ಅವರು ಇವೊತ್ತು ರೈತರಿಗೆ ಬೆಂಬಲವಾಗಿ ನಿಂತು, ರೈತರಿಗೆ ಆಗಿರತಕ್ಕಂಥ ನಷ್ಟವನ್ನು ತುಂಬಿಸಿ ಕೊಡತಕ್ಕಂಥ ಕೆಲಸವನ್ನು ಅವರು ಮಾಡಲಿ ಮತ್ತು ರೈತರಿಗೆ ಪರಿಹಾರವನ್ನು ಕೊಡಿಸಲಿ. ಅದನ್ನು ಬಿಟ್ಟು ಕೇವಲ ರಾಜಕೀಯ ಪ್ರಚಾರಕ್ಕೋಸ್ಕರ ರೈತರ ಪರವಾಗಿ ಅವರು ಹೋರಾಟ ಮಾಡಲಿ. ಅವರಿಂದ ರೈತರಿಗೆ ಬೆಂಬಲಿತ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವುದಾದರೆ, ಈ ಪರಿಸ್ಥಿತಿಯನ್ನು ಎದುರಿಸುವ ಶಕ್ತಿ ಅವರಲ್ಲಿ ಇಲ್ಲವೆನ್ನುವುದಾದರೆ, ರೈತರ ಬಗ್ಗೆ ಅವರಲ್ಲಿ ನೈಜವಾದ ಕಳಕಳಿ ಇರುವುದಾದರೆ, ಅವರು ತನ್ನ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡಬಯಸುತ್ತೇನೆ. ಅಲ್ಲದೆ, ರೈತರಿಗಾದ ನಷ್ಟವನ್ನು ತುಂಬಿಸಿಕೊಡಲು ಅವರು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತಾ, ತಮ್ಮ ಮುಖಾಂತರ ಸರಕಾರವನ್ನು ಒತ್ತಾಯ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಎರಡು ಸಂದರ್ಭಗಳಲ್ಲಿ ಕೋಲಾರ ಜಿಲ್ಲೆಯ ರೈತರು ಬೀದಿಗೆ ಇಳಿದು ಹೋರಾಟ ಮಾಡತಕ್ಕಂಥ ಸಂದರ್ಭ ಬಂತು. ಅದು

ಮಾನ್ಯ ಭೈರೇಗೌಡರಿಗೆ ಗೊತ್ತಿಲ್ಲದೇ ಇರತಕ್ಕಂಥ ವಿಷಯವೇನೂ ಅಲ್ಲ. ಅವರಿಗೆ ನಮಗಿಂತ ಹೆಚ್ಚು ಗೊತ್ತಿದೆ. ಅನಿರೀಕ್ಷಿತವಾಗಿ ರೈತರ ಮೇಲೆ ಬಂದೊದಗಿರತಕ್ಕಂಥ ಈ ಗಂಭೀರವಾದಂಥ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ, ರೈತರಿಗೆ ಸ್ವಾಂತನ ಮಾಡಿ ಬಂದಿರತಕ್ಕಂಥ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸರಕಾರದವರು ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ 35 ರಿಂದ 40 ಸಾವಿರ ರೂ.ಗಳ ವರೆಗೆ ಬಂಡವಾಳವನ್ನು ಹಾಕಿ ಟೋಮೇಟೋವನ್ನು ಬೆಳೆದಿದ್ದಾರೆ. ಈಗ ಬೆಳೆದ ಟೊಮೇಟೊ ಹೆಚ್ಚಾಗಿದೆ, ನಿರೀಕ್ಷೆಗಿಂತಲೂ ಹೆಚ್ಚು ಬೆಳೆದಿದ್ದಾರೆ, ಅನಿರೀಕ್ಷಿತವಾಗಿ ಮಾರ್ಕೆಟ್‌ಗೆ ಹೆಚ್ಚು ಪ್ರಮಾಣದಲ್ಲಿ ಬಂದಿದೆ ಎಂಬಿತ್ಯಾದಿಯಾಗಿ ಎಲ್ಲವೂ ಸತ್ಯವಾದರೂ ಕೂಡ ಇವೊತ್ತು ನಮ್ಮ ಜಿಲ್ಲೆಯ ರೈತರು ಈಗ ಮಳೆ ಕೂಡ ಇಲ್ಲ, ಹಾಗಾಗಿ 20 ಪರ್‌ಸೆಂಟ್‌ನಷ್ಟು ನಮ್ಮಲ್ಲಿ ಭಿತ್ತನೆಯಾಗಿಲ್ಲ. ಅಂಥ ಸಂದರ್ಭದಲ್ಲಿಯೂ ಟೊಮೇಟೋ ಬೆಲೆಯು ಇವೊತ್ತು ಕುಸಿದು ಹೋಗಿದೆ. ರೈತರು ಬಹಳ ಕಂಗಾಲಾಗಿದ್ದಾರೆ. ಅವರಿಗೆ ಯಾವುದೇ ರೀತಿಯಲ್ಲಿ ದಿಕ್ಕು ತೋಚದ ಪರಿಸ್ಥಿತಿಯು ಬಂದಿದೆ. ಇದು ಸರಕಾರದ ಗಮನಕ್ಕೂ ಬಂದಿದೆ. ಸರಕಾರದವರು ನನಗೆ ತಿಳಿದ ಹಾಗೆ ಒಂದು ತೀರ್ಮಾನವನ್ನು ಮಾಡಿದ ಹಾಗೆ ಇದೆ. ಕೆಜಿಗೆ 1-25 ಪೈಸೆಗೆ ತೆಗೆದುಕೊಳ್ಳುತ್ತೇವೆ, ಆ ವ್ಯವಸ್ಥೆಯು ಸರಿಯಲ್ಲ. ಒಂದು ಕೆಜಿಗೆ 1-25 ಪೈಸೆ ಕೊಟ್ಟು ಹಾಪ್‌ಕಾಮ್ಸ್‌ನವರು ತೆಗೆದುಕೊಳ್ಳುವ ವ್ಯವಸ್ಥೆ. ಅದೂ ಕೂಡ ಒಂದು ಸಾವಿರ ಟನ್‌ಗಳವರೆಗೆ ಮಾತ್ರ ತೆಗೆದುಕೊಳ್ಳುತ್ತಾರೆ ಎಂದು ತಿಳಿಯುತ್ತದೆ. ಒಂದು ಸಾವಿರ ಟನ್ ಅಂದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಬೆಳೆಯುವ ಒಟ್ಟು ಬೆಳೆಯ 5 ಪರ್‌ಸೆಂಟ್‌ನಷ್ಟು ಆಗಬಹುದು. ಹೀಗೆ ನಿಗದಿ ಮಾಡಿದ ಬೆಲೆಯೂ ಕಡಿಮೆ ಇದೆ. ಹೀಗೆ ನಷ್ಟಕ್ಕೆ ಕೊಟ್ಟು ಅವರು ಬೆಂಗಳೂರಿಗೆ ತೆಗೆದುಕೊಂಡು ಬಂದು ಇವರಿಗೆ ಕೊಡಬೇಕು. ಈ ಸರಕಾರದ ಸೂಚನೆಯಂತೆ ಮಾಡಲು ಖಂಡಿತಾ ಸಾಧ್ಯವಾಗುವುದಿಲ್ಲ. ಒಂದು ಕೆಜಿಗೆ 1-25 ರೂ.ಗಳ ಹಾಗೆ ಕೊಟ್ಟರೂ ಸಹ ಬೆಂಗಳೂರಿಗೆ ತೆಗೆದುಕೊಂಡು ಬಂದರೆ ಅವರಿಗೆ ಟ್ರಾನ್ಸ್‌ಪೋರ್ಟೇಶನ್ ಖರ್ಚು ಕೂಡ ಉಳಿಯುವುದಿಲ್ಲ. ನಾನು ಸರಕಾರದವರಲ್ಲಿ ಒತ್ತಾಯ ಮಾಡುವುದೇನೆಂದರೆ ಅವರು ಕೆಜಿಗೆ ಎರಡೂವರೆ ರೂ.ಗಳ ಕನಿಷ್ಠ ಬೆಲೆಯನ್ನು ನಿಗದಿ ಮಾಡಿ ಅಲ್ಲಿಯೇ ಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕು. ಅಲ್ಲಿಯ ಮಾರ್ಕೆಟ್‌ನಲ್ಲಿ ಸರಕಾರದವರು ಹೋಗಿ ಕೊಂಡುಕೊಳ್ಳಬೇಕು. ರೈತರು ಇಲ್ಲಿಗೆ ಬಂದು ನಿಮಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ನಾನು ಸರಕಾರವನ್ನು ಒತ್ತಾಯ ಮಾಡುತ್ತೇನೆ. ನಷ್ಟವಾಗಿರತಕ್ಕಂಥಾದ್ದಕ್ಕೆ ತತ್‌ಕ್ಷಣ ಏನಾದರೂ ಪರಿಹಾರವನ್ನು ಕೊಡಬೇಕು. ತೊಗರಿ ಬೆಳೆಗೆ ನಷ್ಟವಾದ ಸಂದರ್ಭದಲ್ಲಿ ನೀವು ಪರಿಹಾರವನ್ನು ಕೊಟ್ಟಿದ್ದೀರಿ. ಹಾಗೆಯೇ ಮಾರ್ಕೆಟಿಂಗ್ ವಿಚಾರದಲ್ಲಿ ಕೂಡ ಒಂದು ಸಮಸ್ಯೆಯು ಇದೆ. ಕಾನೂನು ಪ್ರಕಾರ ರೈತರ ಹತ್ತಿರ ಎಪಿಎಂಸಿಯವರು ಕಮಿಷನ್ ತೆಗೆದುಕೊಳ್ಳಬಾರದು.

(ಈ ಸಮಯದಲ್ಲಿ ಮಾನ್ಯ ಉಪ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಆದರೆ ಮಾರ್ಕೆಟ್ಟಿನಲ್ಲಿರತಕ್ಕಂಥ ಎ.ಪಿ.ಎಂ.ಸಿ ಅಧಿಕಾರಿಗಳು ಮತ್ತು ಏಜೆಂಟರುಗಳು ಶಾಮಿಲಾಗಿದ್ದು ರೈತರ ಹತ್ತಿರ 10 ಪರ್ಸೆಂಟ್ ತೆಗೆದುಕೊಳ್ಳುತ್ತಾರೆ, ಆ ಕಡೆ ಕೊಂಡುಕೊಳ್ಳುವಂತಹವರ ಕಡೆಯಿಂದಲೂ ಕಮೀಷನ್ ತೆಗೆದುಕೊಳ್ಳುತ್ತಿದ್ದಾರೆ. ಇವತ್ತು ರೈತರ ಪರಿಸ್ಥಿತಿ ಬಹಳ ಗಂಭೀರ ಸ್ಥಿತಿಗೆ

ಬಂದಿದೆ. ನಮ್ಮ ಕೋಲಾರ ಜಿಲ್ಲಾ ಪರಿಸ್ಥಿತಿಯನ್ನು ಬೈರೇಗೌಡರಿಗೆ ಹೇಳತಕ್ಕಂಥ ಅವಶ್ಯಕತೆ ಇಲ್ಲ, ಅವರಿಗೆ ಚೆನ್ನಾಗಿ ಗೊತ್ತಿದೆ. ಆದರೆ ಸರ್ಕಾರದಲ್ಲಿ ಇದ್ದೇನೆ ಎನ್ನುವ ಕಾರಣಕ್ಕೋಸ್ಕರ ದಯಮಾಡಿ ನೀವು ಬೇರೆ ರೀತಿ ಆಲೋಚನ ಮಾಡಬೇಡಿ. ಇವತ್ತು ನಮ್ಮ ಜಿಲ್ಲಾ ರೈತರು ಸಂಕಷ್ಟದಲ್ಲಿದ್ದಾರೆ. ಸರ್ಕಾರಕ್ಕೆ ಕಷ್ಟವಾಗಬಹುದು. ಏಕೆಂದರೆ ಪರಂಪರೆ ಮುಂದುವರಿದರೆ ಕಷ್ಟವಾಗುತ್ತದೆ ಎನ್ನುವ ಅಭಿಪ್ರಾಯ ಇರಬಹುದು. ಸಂಕಷ್ಟದ ಪರಿಸ್ಥಿತಿ ಇದೆ, ಮಳೆ ಆಗುತ್ತಾ ಇಲ್ಲ, ಬಿತ್ತನೆ ಆಗುತ್ತಾ ಇಲ್ಲ. ಟೊಮ್ಯಾಟೋ ಬೆಲೆ ಕುಸಿದು ಹೋಗಿದೆ, ಆಲೂಗಡ್ಡೆ ಬೆಲೆ ಇಲ್ಲ, ಈರುಳ್ಳಿ ಬೆಲೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಅವರ ಸಹಾಯಕ್ಕೆ ಬರಬೇಕು. ಈ ಮೂರು ಬೇಡಿಕೆಗಳು ಇವೆ, ಸರ್ಕಾರ ಇದನ್ನು ಒಪ್ಪಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಉಪಾಧ್ಯಕ್ಷರೆ, ಈ ಟೊಮೇಟೋ ಹಣ್ಣನ್ನು ನಾವು ಹಿಂದೆ ಹಳ್ಳಿಯಲ್ಲಿ ಇದ್ದಾಗ ಇದನ್ನು ಬೇರೆ ಶಬ್ದದಲ್ಲಿ ಕರೆಯುತ್ತಿದ್ದೆವು. ಟೋಮ್ಯಾಟೋ ಅಂತ ಕರೆಯುತ್ತಾ ಇರಲಿಲ್ಲ. ನಾಯಿಬೂದಿ ಹಣ್ಣು ಅಂತ ಕರೆಯುತ್ತಿದ್ದೆವು. ಯಾರು ಇದನ್ನು ಉಪಯೋಗಿಸುತ್ತಾ ಇರಲಿಲ್ಲ. ತಿಪ್ಪೆಯಲ್ಲೋ ಎಲ್ಲೋ ಬೆಳೆಯುತ್ತಿತ್ತು, ಯಾರೋ ತೆಗೆದುಕೊಂಡು ತಿನ್ನುತ್ತಾ ಇದ್ದರು " ನಾಯಭೂದಿ ಹಣ್ಣು" ಟೊಮ್ಯಾಟೋ ಬೆಳೆದವರ ಪ್ರಾಣ ಹೋಗುತ್ತದೆ. ನಾನು ಹೇಳಿದೇನಲ್ಲ ಅವರಿಗೇ ಅದೇ ಆಗಿರುವುದು. ಮೊದಲು ಮದನ್‌ಪಲ್ಲಿ, ಲೋಲಾಕು ಅಂತ ಹೇಳಿ ಕೆಲವು ಲೋಕಲ್ ವೆರಿಟಿ ಇತ್ತು. ಈಗ ಹೈಬ್ರಿಡ್ ವೆರೈಟಿಗಳ ಹಣ್ಣುಗಳು ಬಂದು, ವೈಶಾಲಿ, ರೂಪಾಲಿ ಎಲ್ಲ ತರಹದ ಟೋಮ್ಯಾಟೋ ಹಣ್ಣುಗಳು ಇವತ್ತು ಒಂದು ಎಕರೆಗೆ 40 ಸಾವಿರ ರೂಪಾಯಿ ಖರ್ಚು ಮಾಡತಕ್ಕಂಥ ವ್ಯವಸ್ಥೆಗೆ ರೈತರು ಹೋಗಿದ್ದಾರೆ. ಇವತ್ತು ರೈತರು ಬೀದಿ ಪಾಲಾಗಿದ್ದಾರೆ. ಆದರೆ, ಸರ್ಕಾರ ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳುವುದು. ಆಮೇಲೆ ಗೊತ್ತು ಗೊತ್ತು ಅಂತ ಮಾಡುವುದಕ್ಕೆ ಹೊರಡುವುದು, ಮಾರ್ಕೆಟಿಂಗ್ ವ್ಯವಸ್ಥೆ ಅದು ಅಲ್ಲ. ಮಾನ್ಯ ಸಚಿವರು ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕು. ಇಡೀ ದೇಶದ ಎಲ್ಲಾ ಮಾರ್ಕೆಟ್ಟಿನ ವ್ಯವಸ್ಥೆ 24 ಗಂಟೆಯೊಳಗೆ ಯಾವ ಯಾವ ತರಕಾರಿ ರೇಟು ಏನೇನು ನಡೆಯುತ್ತಿದೆ ಅಂತ ನಿಮಗೆ ಮಾಹಿತಿ ಇರಬೇಕು. ಮತ್ತು ಎರಡನೆಯದು ನಮ್ಮ ದೇಶದ ಸುತ್ತಮುತ್ತಲ ಪ್ರದೇಶಗಳಿಗೆ ಏನು ಅವಶ್ಯಕವಾಗಿ ಯಾವ ತರಕಾರಿ ಬೇಕಾಗುತ್ತದೆ ಎನ್ನತಕ್ಕಂಥ ಮಾರ್ಕೆಟಿಂಗ್ ವ್ಯವಸ್ಥೆ ಇರಬೇಕು. ಆವಾಗ ರೈತರಿಗೆ ಏನಾದರೂ ಅನುಕೂಲ ಮಾಡಬಹುದು. ಇಲ್ಲದಿದ್ದರೆ ಕ್ರಾಪಿಂಗ್ ಪ್ಯಾಟರ್ನ್ ಮಾಡಿ ಒಂದು ವರ್ಷ ಮುಂಚಿತವಾಗಿ ಬೆಲೆ ನಿಗದಿ ಮಾಡಬೇಕು. ಸರ್ಕಾರಿ ಮಟ್ಟದಲ್ಲಿ ಹೊರಗಡೆಯಲ್ಲಿ ಯಾವುದೇ ಕಾರಣಕ್ಕೂ ಹರಾಜಿನಲ್ಲಿ 10 ಕೆಜಿ ಟೊಮ್ಯಾಟೋ ಗೂಡೆಯನ್ನು ಕನಿಷ್ಟ 30 ರೂಪಾಯಿಗಿಂತ ಕಡಿಮೆ ಕೂಗಕೂಡದು ಅಂತ ಕಾನೂನು ಆದರೂ ಮಾಡಿ ಆವಾಗ ಏನಾದರೂ ಬದಲಾವಣೆ ಮಾಡಬಹುದು. ಇಲ್ಲದಿದ್ದರೆ ಪ್ರೋಸೆಸ್ಸಿಂಗ್ ಯೂನಿಟ್ ಜಾಸ್ತಿ ಮಾಡಿ. ನಾನು ರೋಮ್‌ಗೆ ಹೋದಾಗ ಟೊಮ್ಯಾಟೋ ಹಣ್ಣಿನ ಬೆಲೆ ಎಷ್ಟು ಅಂತ ಸುಮ್ಮನೆ ಕೇಳಿದೆ ಒಂದು ಕೆಜಿ ಟೊಮ್ಯಾಟೋ ಹಣ್ಣಿಗೆ ಬೆಲೆ 60 ರೂಪಾಯಿ ನ್ಯಾಷನಲ್ ಮಾರ್ಕೆಟಿನಲ್ಲಿ ಸ್ಟೇಟ್‌ವೈಸ್ ಯಾವ ಯಾವ ತರಕಾರಿ ಬೇಡಿಕೆ ಎಷ್ಟು ಎನ್ನುವ ಮಾರ್ಕೆಟಿಂಗ್ ವ್ಯವಸ್ಥೆ ಈ ರಾಜ್ಯದಲ್ಲಿ ಇಲ್ಲ. ಸುತ್ತಮುತ್ತಲ ಹತ್ತಿರ ಇರತಕ್ಕಂಥ ದೇಶಗಳ

ಮಾರ್ಕೆಟಿಂಗ್ ತಿಳುವಳಿಕೆ ಕೊಡತಕ್ಕಂಥ ಆಲೋಚನೆ ಇಲ್ಲ. ಇಲ್ಲವೇ ಒಂದು ವೈಜ್ಞಾನಿಕವಾದ ಕನಿಷ್ಠ ಬೆಲೆ ನಿಗದಿ ಮಾಡತಕ್ಕಂಥ, ಕಾನೂನು ಮಾಡತಕ್ಕಂಥ ವ್ಯವಸ್ಥೆ ರಾಜ್ಯ ಸರ್ಕಾರ ಪ್ರಯತ್ನ ಮಾಡಿಲ್ಲ. ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕಿಂತ ಮುಂಚೆ 6 ತಿಂಗಳ ಮುಂಚಿತವಾಗಿ ಏನು ಮಾಡಬಹುದು ಅಂತ ಅಲೋಚನೆ ಇಲ್ಲ. ಮತ್ತು ಯಾವ ರೀತಿ ಬದಲಾವಣೆ ಮಾಡುತ್ತೀರಿ. ಆ ಹಾಪ್‌ಕಾಮ್ಸ್‌ದಲ್ಲಿ ತೆಗೆದುಕೊಳ್ಳುವುದು ಎಷ್ಟು? ನೀವು ಇಡೀ ರಾಜ್ಯದಲ್ಲಿ ಉತ್ಪಾದನೆಯಲ್ಲಿ 5 ಪರ್ಸೆಂಟು ತೆಗೆದುಕೊಳ್ಳುತ್ತೀರಿ. ಉದಾಹರಣೆ ಸಾಂಬಾರ ಮಾಡುವವನಿಗೆ 100 ರೂಪಾಯಿ, ಟೊಮ್ಯಾಟೋ ಜ್ಯೂಸ್ ಮಾಡುವವನಿಗೆ 150 ರೂಪಾಯಿ, ಅದೇ ಟೊಮ್ಯಾಟೋ ಸಾಸ್ ಮಾಡುವವನಿಗೆ 250 ರೂಪಾಯಿ. 12 ಗಂಟೆ ರಾತ್ರಿ ಹೆಂಡ ಕುಡಿಯುವವನಿಗೆ ಸಾಲಡ್ ಅಂತ ಒಡೆದು ಕೊಡುವವನಿಗೆ 400 ರೂಪಾಯಿ. ಇವತ್ತು ಟೊಮ್ಯಾಟೋ ಹಣ್ಣು ಬೆಳೆದಿರುವವನಿಗೆ 3.50 ಪೈಸೆ ಒಂದು ಕೆಜಿಗೆ. ಅದರಲ್ಲಿ 10 ಪರ್ಸೆಂಟ್ ಕಮೀಷನ್ ಯಾವ ರೀತಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆ. ಒಂದೇ ಸಲ ನಿಮ್ಮ ಕೈಯಿಂದ ಬದಲಾವಣೆ ಮಾಡುವುದಕ್ಕಾಗುತ್ತದೆಂದು ನಾನು ಹೇಳುವುದಿಲ್ಲ. ಆದರೆ ಮುನ್ನೆಚ್ಚರಿಕೆ ಕ್ರಮವಾಗಿ ಸರ್ಕಾರ ಏನು ತೆಗೆದುಕೊಂಡಿದೆ ಇದರಲ್ಲಿ ತಾವು ವಿಫಲರಾಗಿದ್ದೀರಿ. ವಿಫಲರಾಗಿರುವುದರಿಂದಲೇ ಸಮಸ್ಯೆ ಸೃಷ್ಟಿಯಾಗಿದೆ. ನಿಮಗೆ ಒಂದು ಉದಾಹರಣೆ ಈರುಳ್ಳಿ, ಟೊಮ್ಯಾಟೋ ಆಲೂಗಡ್ಡೆ ಯಾವಾಗ ಸಮಸ್ಯೆ ಸೃಷ್ಟಿ ಆಯಿತೋ ನಿಮ್ಮ ಅಧಿಕಾರಿಗಳಿಂದ ಮಾಹಿತಿ ಪಡೆದು ಮುನ್ನೆಚ್ಚರಿಕೆ ಕ್ರಮವಾಗಿ ಏನು ಕೆಲಸ ಮಾಡಿದಿರಿ ತಾವು? ಸ್ವಾಮಿ, ಈ ದೇಶದಲ್ಲಿ ಈ ಟೊಮ್ಯಾಟೋ ಉತ್ಪಾದನೆ ಮೂಲಕ ಎಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ ಲಕ್ಷಾಂತರ ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂಥ ರೈತನ ಬದುಕನ್ನು ಸುಧಾರಣೆ ಮಾಡತಕ್ಕಂಥ ದಿಕ್ಕಿನಲ್ಲಿ ಪ್ರಯತ್ನ ಪಡದೇ ಇದ್ದರೆ, ಕಷ್ಟವಾಗುತ್ತದೆ. ಬೆಳೆ ಜಾಸ್ತಿ ಬಂದಾಗ ಜಾಸ್ತಿಯಾಯಿತು, ಚಳುವಳಿ ಮಾಡುತ್ತಾನೆ ಬಿಸಾಕುತ್ತಾನೆ, ಹೋಗುತ್ತಾನೆ. ಶ್ರೀರಾಮರೆಡ್ಡಿಯವರಿಗೆ ಯಾರೋ ಹೇಳುತ್ತಾ ಇದ್ದರು, ಔಷಧಿ ಹೊಡೆದಿದ್ದು ಇನ್ನೂ ಸ್ವಲ್ಪ ಉಳಿದುಕೊಂಡಿದೆ, ಟೊಮ್ಯಾಟೋ ಹಣ್ಣಿಂದ ಏನು ಬರಲಿಲ್ಲ ಆದ್ದರಿಂದ ಮನೆಗೆ ಹೋಗಿ ಆ ಔಷಧಿ ಕುಡಿದು ಬಿಡುತ್ತೇನೆ ಅಂತ ಹೇಳಿದಾ ಎಂದು ಇವತ್ತು ಕೆ.ಆರ್. ಹಾಸ್ಪಿಟಲ್‌ಗೆ ಹೋಗಿ ಒಂದು ಮಾಹಿತಿ ಪಡೆಯಿರಿ, ಯಾವ ಜನ ವಿಷ ತೆಗೆದುಕೊಂಡು ಸಾಯುತ್ತಾರೆ. ಹಳ್ಳಿಯ ಜನರೇ ವಿಷ ತೆಗೆದುಕೊಂಡು ಸಾಯುತ್ತಾರೆ. ಕಾರಣ ಇದೆ. ಆದರೆ ಉತ್ಪಾದನೆ ಮಾಡುವವನಿಗೆ ಹೀಗೆ ಅನಾನುಕೂಲ ಮಾಡಿದರೆ ಎಲ್ಲರೂ ಉಪವಾಸ ಬೀಳುವಂತಹ ಒಂದು ಕಾಲ ಬಂದರೂ ಬರಬಹುದು. ಅತ್ಯಂತ ಗಂಭೀರವಾಗಿ ವಿಚಾರ ಮಾಡಿ, ಸರ್ಕಾರ ಕನಿಷ್ಠ 2.50 ಪೈಸೆಯಾದರೂ ಒಂದು ಕೇಜಿಗೆ ನಿಗದಿ ಮಾಡಿ.

+ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳನ್ನು ಯಾರಿಗೆ ಕೊಟ್ಟಿರತಕ್ಕಂಥದ್ದು? ಯಾವುದಾದರೂ ಸರ್ಕಾರ, ಇಡೀ ಪ್ರಪಂಚದಲ್ಲಿ ಯಾವ ಬೆಳೆಯನ್ನು ಎಷ್ಟು ಬೆಳೆಯಬೇಕು. ಬೆಳೆದಂಥ ಫಸಲಿಗೆ ಏನು ಬೆಲೆ ಕೊಡಬೇಕು. ಅದನ್ನು ಕೊಟ್ಟು ಸರ್ಕಾರ ಖರೀದಿ ಮಾಡಿ ಇಟ್ಟು ಮತ್ತೆ ಯಾವಾಗ ಅದನ್ನು ಮಾರಬೇಕು. ರಷ್ಯಾದಲ್ಲಿ ಕೇವಲ 5 ವರ್ಷ ಇದನ್ನು ಮಾಡಿದರು. ಫ್ರೀ ಮಾರ್ಕೆಟ್ ಎಕಾನಮಿ ಇರುವ ಕಡೆ ಅಮೇರಿಕಾದಲ್ಲಿ ಏನು ವ್ಯವಸ್ಥೆ ಇದೆ? ಇವತ್ತು ನೀವು ಕಬ್ಬು ಸುಟ್ಟಿರೋ ಇಲ್ಲವೋ ಗೊತ್ತಿಲ್ಲ. ಹತ್ತಿಗೆ ಬೆಂಕಿ ಹಚ್ಚಿರೋ ಇಲ್ಲವೋ

ಗೊತ್ತಿಲ್ಲ. ಹತ್ತಿ ಬೆಳೆಯುವನಿಗೆ ಏನು ಸಿಕ್ಕಿರುವುದಿಲ್ಲ ಟೆಕ್ಸ್‌ಟೈಲ್ ಮಿಲ್ಲಿಗೆ ಹೋಗಿ ಅದು ಬಟ್ಟೆಯಾಗಿ ಬಂದ ಮೇಲೆ ಬೆಲೆ ಬಹಳ ಆಗುತ್ತದೆ. ಕಬ್ಬು ನಾವೇ ಎಷ್ಟೋ ಸಲ ಸುಟ್ಟಿದ್ದೇವೆ. ಸಕ್ಕರೆ ಇಂಟರ್ ನ್ಯಾಷನಲ್ ಮಾರ್ಕೆಟು. ಅದಕ್ಕೆ ಸರ್ಕಾರ ಏನು ಮಾಡಿಲ್ಲ ಎಂದು ನಾವು ಸಹ ಹೇಳುತ್ತೇವೆ. ನೀವು ಹೇಳಿದ ಹಾಗೆ ಕೇಳುತ್ತೇವೆ, ಸರ್ಕಾರ ಇವತ್ತು ಟೊಮ್ಯಾಟೋ ಕೊಂಡುಕೊಂಡೆವು ಅಂತ ಹೇಳಿ ಅದನ್ನು ಚಟ್ನಿ ಮಾಡುವುದು ಏನು ಮಾಡುವುದು? It should be preserved. ತಾವು ಒಳ್ಳೆಯ ವಿಚಾರ ಹೇಳಿದ್ದೀರಿ ಉತ್ತರ ಕೊಡುತ್ತೇನೆ, ಆ ರೀತಿ ರೈತರ ಹಿತರಕ್ಷಣೆಗೋಸ್ಕರ ಅಮೇರಿಕಾದಲ್ಲಿ ಏನು ಇದೆ, ನೀವು ಗೋಧಿ ಬೆಳೆಯುತ್ತಿರೋ ಮತ್ತೊಂದು ಬೆಳೆಯುತ್ತಿರೋ ತೆಗೆದುಕೊಂಡು ಹೋಗಿ ಮಾರ್ಕೆಟ್ ಪ್ರೈಸಿಗೆ ನೀವು ಅರ್ಧದಷ್ಟು ಗೋದಾಮಿನಲ್ಲಿ ಇಡುತ್ತೀರಿ. ಮತ್ತು ನಿಮಗೆ ಯಾವಾಗ ಬೇಕು ಆವಾಗ ವಾಪಾಸ್ಸು ಕೊಡುತ್ತಾರೆ. ಅದರಲ್ಲಿ ಕಮ್ಮಿಯಾದರೆ ಲುಕ್ಸಾನ್‌ಆಗುತ್ತದೆ ಆವಾಗ ತೊಂದರೆಯಾಗುತ್ತದೆ, ಜಾಸ್ತಿಯಾದರೆ ಲಾಭ ಆಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ಇಂಗ್ಲೆಂಡಿನಲ್ಲಿ ಒಂದು ಸಲ ಕೋಳಿಮೊಟ್ಟೆಗೆ ಭಯಂಕರ ಅಂದರೆ 10ರಷ್ಟು ಬೆಲೆ ಜಾಸ್ತಿ ಆಯಿತು. ಅದಕ್ಕೆ ಸರ್ಕಾರಕ್ಕೆ ಹೇಳಿದರು ಕೋಳಿಗಳೆ ಇಲ್ಲವೋ ಮೊಟ್ಟೆನೆ ಇಲ್ಲವೋ ಏಕೆ ಹೀಗೆ ಆಯಿತು. Then an enquiry was ordered. ಆ ಎನ್‌ಕ್ವಾಯರಿ ಆದಾಗ ಏನು ಆಯಿತು, ಹತ್ತಾರು ಕಡೆ ಈ ಡೀಪ್ ಫ್ರೀಜರ್ ಏನು ಬಂತು ಆರಾರು ತಿಂಗಳು ಗಟ್ಟಲೆ ಕೋಳಿಮೊಟ್ಟೆ ಇಡಬಹುದು. ಅವರು ಎಲ್ಲಾ ಖರೀದಿ ಮಾಡಿ ಸ್ಟಾಕ್ ಮಾಡಿದರು. ಯಾವಾಗ ಸಿಗಲಿಲ್ಲ ಆವಾಗ 10 ರಿಂದ 15 ಪಟ್ಟು ಜಾಸ್ತಿ ಮಾಡಿದರು. ಆ ರೀತಿ ಇವತ್ತು ಬೈರೇಗೌಡರು ಟೊಮ್ಯಾಟೋ ಎಲ್ಲ ಕೊಂಡುಕೊಂಡು ಇಟ್ಟುಕೊಳ್ಳಲಿಕ್ಕಾಗುತ್ತಾ. ಕಬ್ಬು ಬೆಳೆಗಾರರಿಗೆ ಸಕ್ಕರೆ ರೇಟು ಹೆಚ್ಚಾದಾಗ ಕೆಲವು ಸಲ 700 ರೂಪಾಯಿ ಕೆಲವು ಸಾರಿ 500 ರೂಪಾಯಿ ಆಗುತ್ತದೆ. ಆದ್ದರಿಂದ ದಯವಿಟ್ಟು ತಮ್ಮಂಥ ವಿಚಾರವಂತರು ಏನು ಮಾಡಲಿಲ್ಲ. ಅಂತ ಹೇಳುವುದು ಸರಿಯಲ್ಲ ಹೋದಸಲ ಉಳ್ಳಾಗಡ್ಡಿ ಮಾರ್ಕೆಟ್ ಬಿದ್ದು ಹೋಯಿತು, ಅದಕ್ಕೆ ಆವಾಗ ನಾವು ಏನು ಮಾಡಿದೆವು, ಬೈರೇಗೌಡರು ರಿಸ್ಕ್ ತೆಗೆದುಕೊಂಡ ಖರೀದಿ ಮಾಡಿದರು. ಖರ್ಗೆಯವರ ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ಏನು ಆಯಿತು. ಅದಕ್ಕೆ I agree with you ಸರ್ಕಾರ ಎಲ್ಲಾ ಸರ್ವಾಂಗೀಣ ಮತ್ತು ಸರ್ವಶಕ್ತಿ ಇಟ್ಟುಕೊಂಡಿರುತ್ತೆ ಅಂತ ಅಲ್ಲಾ. ಅಡಿಕೆಗೆ ಧಾರಣೆ ಆಯಿತು ಎಲ್ಲಾ ಅಡಿಕೆ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಬೇಕಾದರೆ ತಾವು ಶಿವಮೊಗ್ಗದಲ್ಲಿ ಬಂದು ನೋಡಿ. ಮತ್ತೆ ಅದು ಬಿದ್ದು ಹೋಯಿತು ಅಂದ ಕೂಡಲೆ, ಅದಕ್ಕೆ ಎರಡು ಕಡೆ ಸರ್ಕಾರ ಜವಾಬ್ದಾರಿ, ಇಲ್ಲ ಅಂತ ನಾನು ಹೇಳುವುದಿಲ್ಲ. ಸರ್ಕಾರ ಜವಾಬ್ದಾರಿ ಇರಬೇಕು ಎಲ್ಲಿಯವರೆಗೆ ಮಾರ್ಕೆಟ್ಟಿನಲ್ಲಿ ಯಾವುದೇ ಒಂದು ಬೆಳೆಯನ್ನು ಫಸಲನ್ನು ರೈತರನ್ನು ರಕ್ಷಣೆ ಮಾಡವುದಕ್ಕೆ ಎಷ್ಟರಮಟ್ಟಿಗೆ ಹಣ ಇನ್‌ವಾಲ್ವ್ ಮಾಡಬೇಕು ಅಷ್ಟು ಮಾಡುತ್ತದೆ. ಬಹಳ ಆದರೆ 4 ರಿಂದ 5 ಕೋಟಿ ಮಾಡಬಹುದು. ಟೊಮ್ಯಾಟೋ ಎಲ್ಲಾ ಕೊಂಡುಕೊಳ್ಳಿ, ಉಳ್ಳಿಗಡ್ಡಿ ಎಲ್ಲಾ ಕೊಂಡುಕೊಳ್ಳಿ ಆಮೇಲೆ ಮಾರು ಅಂದರೆ ಆಗುವುದಿಲ್ಲ. ತಮ್ಮಂಥವರು, ರೈತರ ಮುಖಂಡರು ರೈತರ ಸಮಸ್ಯೆಗಳು ಗೊತ್ತಿರತಕ್ಕಂಥವರು ನೀವು ನಾವು ಮಾಡಬೇಕು. ಗೌರ್ನಮೆಂಟ್ ಆಫ್ ಇಂಡಿಯಾ ಏನು ಮಾಡಬೇಕು, ಗೌರ್ನಮೆಂಟ್ ಆಫ್ ಕರ್ನಾಟಕ ಏನು ಮಾಡಬೇಕು. ಪಕ್ಕದಲ್ಲಿ ಆಂಧ್ರದವರು ಏನು ಮಾಡುತ್ತಿದ್ದಾರೆ, ತಮಿಳುನಾಡಿನವರು ಏನು ಮಾಡುತ್ತಿದ್ದಾರೆ ದಯವಿಟ್ಟು ಹೇಳಿದರೆ ನಿಜವಾಗಿಯೂ ಹಾಗೆ ನೋಡಿಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಮುಖ್ಯಮಂತ್ರಿಗಳೆ, ಸರ್ಕಾರ ಎಲ್ಲಾ ಒಂದೇ ಸಾರಿ ಮಾಡಿಬಿಡಿ ಅಂತ ಹೇಳಲಿಲ್ಲ. ಸರ್ಕಾರ ಮುನ್ನೆಚ್ಚರಿಕೆ ಕ್ರಮದ ಬಗ್ಗೆ ಆಲೋಚನೆ ಮಾಡಬೇಕು. ಉದಾಹರಣೆಗೆ, ತೋಟಗಾರಿಕೆ ಇಲಾಖೆ ಏನು ಇದೆ ಅವರಲ್ಲಿ ಇಡೀ ರಾಜ್ಯದಲ್ಲಿರುವ ಮಾರುಕಟ್ಟೆ ವ್ಯವಸ್ಥೆ 24 ಗಂಟೆಯ ಮಾಹಿತಿ ಇರಬೇಕು. ಯಾವ ರಾಜ್ಯದಲ್ಲಿ ಅವಶ್ಯಕವಾಗಿ ಯಾವುದಾದರೂ ಆಹಾರ ಪದಾರ್ಥ ತರಕಾರಿ ಬೆಳೆ ಅನಾನುಕೂಲ ಇದೆ, ಅಂತಹ ಕಡೆ ಸರಬರಾಜು ಮಾಡುವಂತಹ ಶಕ್ತಿ ರಾಜ್ಯ ಸರ್ಕಾರಕ್ಕೆ ಇದ್ದರೆ, ಆ ರೀತಿ ಮಾರುಕಟ್ಟೆ ಸಿಸ್ಟಮ್ ಬಗ್ಗೆ ಯೋಚನೆ ಮಾಡಬೇಕು. ರೈತರು ಒಂದೇ ಸಾರಿ ಟೋಮ್ಯಾಟೋ ಹಣ್ಣು ಬೆಳೆದರು, ಒಂದೇ ಸಾರಿ ಆಲೂಗಡ್ಡೆ ಬೆಳೆದರು ಎಂದು ತಾವು ಹೇಳಿದಿರಿ ತಾವು ಕ್ರಾಪಿಂಗ್ ಪಾಟರ್ನ್ ಇಂಟ್ರಡ್ಯೂಸ್ ಮಾಡಿ. ಅದರಲ್ಲಿ ವಿಫಲರಾಗಿದ್ದೇವೆ, ನಾವು ಒಪ್ಪಿಕೊಳ್ಳುವುದರಲ್ಲಿ ಬೇರೆ ಮಾತಿಲ್ಲ. ತಾವು ಇಂತಿಂಥ ಬೆಳೆಗೆ ಇಂತಿಂಥ ಬೆಲೆ ಕೊಡುತ್ತೇವೆಂದು ಹೇಳಿದರೆ, ಆಯಾಯಾ ಪ್ರದೇಶದಲ್ಲಿ ಇಂತಹದ್ದನ್ನು ಬೆಳೆಯಬೇಕು ಎನ್ನತಕ್ಕಂಥ ವಾತಾವರಣ ವೈಜ್ಞಾನಿಕ ಚಿಂತನೆ ಆಧಾರದ ಮೇಲೆ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆಯವರು ಕೆಲಸ ಮಾಡಿದರೆ, ಇಬ್ಬರು ಇನ್‌ವಾಲ್ವ್‌ಮೆಂಟ್ ಆಗಿ ಏನಾದರೂ ಬದಲಾವಣೆ ಮಾಡಬಹುದು. ತಾವು ಎಷ್ಟು ಶೈತ್ಯಾಗಾರ ಕಟ್ಟಿಸಿದ್ದೀರಿ. ಉದಾಹರಣೆಗೆ ಹರಿಯಾಣದಲ್ಲಿ 130 ಶೈತ್ಯಾಗಾರ ಇದೆ. ಅದು ನಮಗಿಂತ ಚಿಕ್ಕ ರಾಜ್ಯ, ನಾವು ಕರ್ನಾಟಕದಲ್ಲಿ ಏನು ಮಾಡುತ್ತೇವೆ, ಆಮೇಲೆ ನೀವು ಪ್ರೋಸೆಸ್ ಯೂನಿಟ್ ಜಾಸ್ತಿ ಮಾಡಬೇಕು. ಪ್ರೋಸೆಸ್ ಯೂನಿಟ್ ಜಾಸ್ತಿ ಮಾಡದಿದ್ದರೆ ಟೊಮ್ಯಾಟೋ ಸಾಸ್, ಟೊಮ್ಯಾಟೋ ಕೆಚಪ್ ಎಲ್ಲವನ್ನು ಇಂಟ್ರಡ್ಯೂಸ್ ಮಾಡಿ. ಎಲ್ಲ ಕಡೆ ಇದಕ್ಕೆ ಮಾರುಕಟ್ಟೆ ಇಂಟ್ರಡ್ಯೂಸ್ ಮಾಡದಿದ್ದರೆ, ಮುಂದಿನ ವರ್ಷದಲ್ಲಿ ಇದೇ ರೀತಿ ಆಗಬಹುದು.

4.40 ಪಿ.ಎಂ

ನೀವು ಬರಬಹುದು ನಾಳೆ ಇನ್ನೊಂದು ಸರಕಾರ ಬರಬಹುದು. ಇದೇ ರೀತಿ ಪ್ರತಿ ವರ್ಷವೂ ಆಗುತ್ತಿದೆ, ಇದೇ ರೀತಿಯಲ್ಲಿ ರೈತರು ಶೋಷಣೆಗೆ ಒಳಗಾಗುತ್ತಿರುತ್ತಾರೆ. ಹಾರ್ಟಿಕಲ್ಚರ್ ಇಲಾಖೆಯವರು ಇಸ್ರೇಲ್‌ಗೆ ಹೋಗಿದ್ದರು. ಪ್ರಪಂಚದಲ್ಲಿ ಎಲ್ಲಿಯಾದರೂ ಈ ರೀತಿ 3 ರೂಪಾಯಿ 2 ರೂಪಾಯಿ ಕೆ.ಜಿ. ಎಂದು ಇದೆಯೆ? ತಾವು ವಿಚಾರ ಮಾಡಿ. ಇಂತಹ ಮಾರ್ಕೆಟ್ ಪ್ರಪಂಚದಲ್ಲಿ ಎಲ್ಲಿ ಇದೆಯೋ ನನಗೆ ಗೊತ್ತಿಲ್ಲ. ನಾನು ಮೊನ್ನೆ ರೋಮ್‌ಗೆ ಹೋಗಿದ್ದೆ, ಅಲ್ಲಿ ಹೋಗಿ ನೋಡಿದ್ದಕ್ಕೆ ಹೇಳುತ್ತಿದ್ದೇನೆ ಇಲ್ಲದಿದ್ದರೆ ನನಗೆ ಏನು ಗೊತ್ತಾಗುತ್ತಿತ್ತು. ಅಲ್ಲಿ ಟೊಮ್ಯಾಟೋ 60 ರೂಪಾಯಿ ಒಂದು ಕೆಜಿ ಬೆಲೆ ಇದೆ. ತಾವು ಇದನ್ನು ಸುಧಾರಿಸಲು ಯಾವ ರೀತಿ ಪ್ರಯತ್ನ ಪಟ್ಟಿದ್ದೀರಿ ಹೇಳಿ. ಟೊಮ್ಯಾಟೋ ಒಂದೇ ಅಲ್ಲ ಯಾವುದೇ ತರಕಾರಿಗಳಿಗೆ ಮಾರುಕಟ್ಟೆ ಬಿದ್ದಾಗ ರೈತರಿಗೆ ಸರಕಾರದ ಮೂಲಕ ಏನಾದರೂ ಅನುಕೂಲ ಮಾಡಿಕೊಟ್ಟಿದ್ದೀರಾ? ಯಾವುದೇ ಸರಕಾರ ಬಂದರೂ ಎಲ್ಲವನ್ನೂ ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ, ಇದನ್ನು ಬಗೆಹರಿಸಲು ಯಾವ ದಿಕ್ಕಿನಲ್ಲಿ ಪ್ರಯತ್ನ ಮಾಡಿದ್ದೀರಿ ಅದನ್ನಾದರೂ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತಹ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ರೈತರು ಬೆಳೆದಂತಹ ಬೆಳೆಗೆ ಬೆಲೆ ಬರಬೇಕಾದರೆ ಕೋಲ್ಡ್ ಸ್ಟೋರೇಜ್

ಬರಬೇಕು ಮತ್ತು ಎಲ್ಲಿಯವರೆಗೆ ಪ್ರೋಸೆಸಿಂಗ್ ಯೂನಿಟ್ಸ್ ಇರುವುದಿಲ್ಲ ಅಲ್ಲಿಯವರೆಗೆ ಆತನು ಬೆಳೆದಂತಹ ಬೆಳೆಗೆ ನ್ಯಾಯವಾದ ಬೆಲೆ ಸಿಗುವುದಕ್ಕೆ ಸಾಧ್ಯವಿಲ್ಲ. ಈಗ ಸಧ್ಯಕ್ಕೆ ರೈತ ಬೆಳೆದಂತಹ ಟೊಮೇಟೋಗೆ ಒಂದು ಕೆಜಿಗೆ 50 ಪೈಸೆ ಬೆಲೆ ಇರತಕ್ಕಂಥಾದ್ದು ಕೇವಲ ರಾಜ್ಯದ ರೈತರಿಗೆ ಅಲ್ಲ., ರಾಷ್ಟ್ರಮಟ್ಟದಲ್ಲಿ ಎಲ್ಲರಿಗೂ ಕುತ್ತು ಆಗಿದೆ. ಇವತ್ತು ಎರಡು ಸಾವಿರ ಎಕರೆಯಲ್ಲಿ ಬೆಳೆ ಇರಬಹುದು. ಟಿ.ವಿ.ಯಲ್ಲಿ ಪತ್ರಿಕೆಯಲ್ಲಿ ಎಲ್ಲವೂ ಪ್ರಚಾರವಾಗಿದೆ. ಕೋಲಾರ ಮತ್ತು ತುಮಕೂರು ಮತ್ತು ಬೆಂಗಳೂರಿಗೆ ಕೆಲವು ಭಾಗಗಳಲ್ಲಿ ಈ ಟೋಮೇಟೋ ಬೆಳೆ ಬಂದಿರತಕ್ಕಂಥಾದ್ದು ಎಲ್ಲ ಸೇರಿ 2000 ಎಕರೆ ಇರಬಹುದು. ಇಲ್ಲವೇ 3000 ಎಕರೆಯಲ್ಲಿ ಇರಬಹುದು. ಈ 3000 ಎಕರೆಯಲ್ಲಿ ಟೊಮೇಟೋ ಬೆಳೆದ ರೈತನಿಗೆ ಒಳ್ಳೆ ಬೆಲೆ ಸಿಗುವಂತೆ ತಾವು ಮಾಡಬೇಕಾಗಿತ್ತು. ನಿಮಗೆ ಹಾಪ್‌ಕಾಮ್ಸ್ ಇದೆ ಆಗ್ರೋ ಕಾರ್ಪೊರೇಷನ್ ಇದೆ, ಇದರ ಮುಖೇನ ಬೇರೆ ಬೇರೆ ರಾಜ್ಯಗಳಿಗೆ ರವಾನೆ ಮಾಡತಕ್ಕಂತಹ ಕೆಲಸವನ್ನು ನೀವು ಕ್ವಿಕ್ ಆಗಿ ಮಾಡಿದ್ದರೆ, ಬಹುಶಃ ರೈತನಿಗೆ ಒಳ್ಳೆಯ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಅದು ಆಗಲಿಲ್ಲ ಸರಕಾರ ಕ್ವಿಕ್ ಆಗಿ ಆ್ಯಕ್ಟ್ ಮಾಡಲಿಲ್ಲ. ರೈತರು ಮಂತ್ರಿಗಳ ಮನೆ ಬಾಗಿಲಿಗೆ ಬಂದರು. ಇವತ್ತು ಟೊಮೇಟೋವನ್ನು ಬೀದಿಯಲ್ಲಿ ಹಾಕಿ ಕಾರುಗಳನ್ನು ಲಾರಿಗಳನ್ನು ಓಡಿಸಿ ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ಮಾಡುವ ಮೂಲಕ ಸರಕಾರದ ಗಮನವನ್ನು ಸೆಳೆದರು. ಆದರೂ ಅದು ಆಗಲಿಲ್ಲ. ಗಮನ ಸೆಳೆದಾಗ ಕೂಡ ತಾವು ಕ್ರಮ ತೆಗೆದುಕೊಂಡಿಲ್ಲ. ಒಂದು ಎಕರೆಯಲ್ಲಿ ಟೊಮೇಟೋ ಬೆಳೆಯ ಬೇಕಾದರೆ ವೈಜ್ಞಾನಿಕವಾಗಿ....

ಶ್ರೀ ಜೆ.ಹೆಚ್. ಪಟೇಲ್ : ತಾವೂ ಒಂದು ಕಾಲಕ್ಕೆ ಸರಕಾರ ನಡೆಸಿದ್ದವರು. ಯಾವತ್ತಾದರೂ ಈ ತರಹ distress sale ಬಗ್ಗೆ ಪೆರಿಷಬಲ್ ಗೂಡ್ಸ್ ಬೇರೆ ಸಸ್ಟೈನಬಲ್ ಗೂಡ್ಸ್ ಬೇರೆ ಮಾರುಕಟ್ಟೆಯಲ್ಲಿ ಇದೆ. ಪೆರಿಷಬಲ್ಸ್ ಗೂಡ್ಸ್ ಬಗ್ಗೆ ಹಿಂದೂಸ್ಥಾನದಲ್ಲಿ ಯಾವುದಾದರೂ ಸರಕಾರ ಕಳೆದ 50 ವರ್ಷಗಳಲ್ಲಿ ಯಾವ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ತಾವು ವಿಚಾರ ಮಾಡಬೇಕು. ಕ್ರಾಪ್ ಪ್ಯಾಟ್ರನ್ ಎಂದು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದರು. ಒಂದು ಎಕರೆಗೆ 20 ಟನ್ ಬೆಳೆಯುವ ಕಬ್ಬಿಗೆ ಉತ್ತರ ಪ್ರದೇಶದಲ್ಲಿ ಪುರಸ್ಕಾರ ಕೊಡುತ್ತಾರೆ. ನಾವು 60-70 ಟನ್ ಬೆಳೆಯುತ್ತೇವೆ. Crop- pattern should be a national formula and it should be enforced. ಬರೀ ಇದನ್ನು ಬೆಳೆಯಿರಿ ಎಂದು ಹೇಳುವುದಿಲ್ಲ. ಇದನ್ನು ಬೆಳೆಯದಿದ್ದರೆ ನಿಮ್ಮನ್ನು ಶಿಕ್ಷೆ ಮಾಡುತ್ತೇವೆಂದು ಹೇಳತಕ್ಕಂತಹ ಸರಕಾರ ಯಾವುದಾದರೂ ಇದ್ದರೆ, ಹೇಳಲಿ ಅದರ ಕಾನೂನನ್ನು ತರಿಸಿಕೊಂಡು ನಾನು ಹೇಳುತ್ತೇನೆ. ನೀವು ಕಬ್ಬು ಬೆಳೆಯಬೇಡ, ಭತ್ತ ಬೆಳೆಯಬೇಡವೆಂದು ಹೇಳಿದರೆ ನೀವು ಬನ್ನಿ ನಮ್ಮ ಊರಿಗೆ ಓಟಿಗೆ ಬನ್ನಿ ಎಂದು ಹೇಳುತ್ತಾರೆ. ಆಗ ನೀವೂ ನಾವೂ ಹೆದರುತ್ತೇವೆ. ಅದಕ್ಕೆ let there be a scientific crop-pattern ಇರಬೇಕಾಗುತ್ತದೆ. ಕಳೆದ ವರ್ಷ ಮಾನ್ಯ ಬೈರೇಗೌಡರು, ರಿಸ್ಕ್ ತೆಗೆದುಕೊಂಡರು. ಮಾರುಕಟ್ಟೆಗೆ ಸರಕಾರ ಎಂಟ್ರಿಯಾಯಿತು ಎಂದ ಕೂಡಲೇ ಅದು ಸರಿ ಹೋಯಿತು. ಅವರು ಹಣವನ್ನೇನೂ ಎಲ್ಲ ಇನ್‌ವೆಸ್ಟ್ ಮಾಡಲಿಲ್ಲ. ನಾವೇನು ಎಲ್ಲವನ್ನೂ ಕೊಂಡು ಮಾರುವುದಕ್ಕೆ ಹೋಗಿಲ್ಲ. ಎಲ್ಲರಿಗೂ ಇದರ ಸಮಸ್ಯೆ ಗೊತ್ತಿದೆ. ಟೊಮೇಟೋವನ್ನು ಸರಕಾರದ ಮೇಲೆ ಎಸೆಯುವುದು. ರೈತರು ಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ ಏನು ಮಾಡಬೇಕೆಂದು ತಿಳಿಯದೆ

ಒಂದೊಂದು ಸಲ ನಾವೂ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತೇವೆ. ಒಂದು ಸಲ ನಾವು ಉಳ್ಳಾಗಡ್ಡೆ ಬೆಳೆದಿದ್ದೆವು. ನಮ್ಮ ದೊಡ್ಡಪ್ಪನ ಮಗ ಭದ್ರಾವತಿಗೆ ಅದನ್ನು ಮಾರಲು ಹೇರಿಕೊಂಡು ಹೋದ. ಆ ಉಳ್ಳಗಡ್ಡೆ ಒಂದು ವರ್ಷ 600 ಆಗುತ್ತದೆ ಇನ್ನೊಂದು ವರ್ಷ 60ಕ್ಕೆ ಇಳಿಯುತ್ತದೆ, ಭಾರಿ ಫ್ಲಕ್ಚುಯೇಷನ್ ಇದೆ. ನಾವು ಚೆನ್ನಾಗಿ ಬೆಳೆಯುತ್ತೇವೆಂದು ನಮ್ಮ ಊರಾದ ಕಾರಿಗನೂರಿನಿಂದ ಚನ್ನಗಿರಿ ಮೇಲೆ ಭದ್ರಾವತಿಗೆ ಹೇರಿಕೊಂಡು ಹೋದ, ಅಲ್ಲಿ 3 ದಿವಸ ಮಾರುಕಟ್ಟೆಯಲ್ಲಿ ಯಾರೂ ಕೇಳಲಿಲ್ಲ. ಮುನಿಸಿಪಾಲಿಟಿಯವರು ಕೊಳೆತ ಉಳ್ಳಾಗಡ್ಡಿಯನ್ನು ತಂದು ಇಲ್ಲಿ ಹಾಕಿದ್ದೀಯ ಎಂದು ನಿಮ್ಮನ್ನು ಪ್ರಾಸಿಕ್ಯೂಟ್ ಮಾಡುತ್ತೇವೆಂದು ಇವನನ್ನು ಹಿಡಿದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ಗೆ ಹಾಕಿದರು. ಉಳ್ಳಾಗಡ್ಡೆ ಬಿಟ್ಟರು. ದುಡ್ಡು ಬೇಡ ಏನೂ ಬೇಡವೆಂದು ಅವನು ಊರಿಗೆ ಬಂದ. ಇವೆಲ್ಲಾ ನಡೆದಿರುವ ಘಟನೆಗಳು. Mr. Reddy, my only request to you is, you show the way we will do it.

ಶ್ರೀ ಟಿ.ಬಿ. ಜಯಚಂದ್ರ : ಸಂದರ್ಭ ಈಗ ಒದಗಿರುವುದರಿಂದ ಅವರು 50 ಪೈಸೆಗೆ ಒಂದು ಕೆ.ಜಿ ಟೊಮೇಟೋವನ್ನು ಯಾವ ಸಂದರ್ಭದಲ್ಲೂ ಕೂಡ ಮಾರಿರಲಿಲ್ಲ. ಅಂತಹ ಪರಿಸ್ಥಿತಿ ಬಂದಿರಲಿಲ್ಲ. ಈಗ ಸರಕಾರದಲ್ಲಿ ಹಾಪ್‌ಕಾಮ್ಸ್ ಇದೆ. ಸರಕಾರದ ಕಣ್ಣನ್ನು ಅವರು ತೆರಿಸಿದ್ದಾರೆ. ಕೋಲ್ಡ್ ಸ್ಟೋರೇಜ್ ಅನ್ನು ಏಕೆ ಹಾಕಲಿಲ್ಲ? ಹಾಕುವುದಕ್ಕೆ ನೀವು ಯೋಚನೆ ಮಾಡಬಹುದಿತ್ತಲ್ಲವೇ? ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖೇನ ನೀವು ಯಾವ ರೈತ ಬೆಳೆಯುತ್ತಾನೆ, ಅಲ್ಲಿಗೇ ಹೋಗಿ ಪ್ರೋಸೆಸ್ ಮಾಡುತ್ತೇವೆಂದು ನಮ್ಮನ್ನು ಮಾನ್ಯ ಬೈರೇಗೌಡರು ತಮ್ಮ ಮನೆಗೆ ಕರೆದುಕೊಂಡು ಹೋಗಿ ಎಲ್ಲ ಸಿನಿಮಾ ತೋರಿಸಿದರು. ಮಾನ್ಯ ಬೈರೇಗೌಡರ ಕಾನ್‌ಸೆಪ್ಟ್ ಇದಾಗಿತ್ತು. ಇದನ್ನು ತಾವು ಮಾಡಬಹುದಿತ್ತಲ್ಲವೇ ಅದಕ್ಕೆ ಏನು ಮಾಡಿದ್ದೀರಿ. ರೈತರು ಇದನ್ನೆಲ್ಲ ನೋಡಿಕೊಂಡು ನಮ್ಮವರೇ ಒಬ್ಬರು ಇದ್ದು ಮಾನ್ಯ ಬೈರೇಗೌಡರು ಕೃಷಿ ಸಚಿವರಾಗಿದ್ದಾರೆ, ನಮಗೆ ಇದರಿಂದ ಲಾಭವಾಗಬಹುದೆಂದು ನಂಬಿಕೆಯಿಂದ ಇಷ್ಟೊಂದು ಬೆಳೆ ಬೆಳೆಯುವುದಕ್ಕೆ ಮುಂದೆ ಹೋಗಿರಬಹುದು. ಇದಕ್ಕೆ ಕಾರಣ ನೀವೇ ಆಗುತ್ತೀರಿ. ರೈತರಿಗೆ ಬಹಳ ಕಷ್ಟ. ಅವರು ಒಂದು ಎಕರೆಗೆ 20-30 ಸಾವಿರ ರೂಪಾಯಿ ಖರ್ಚು ಮಾಡಿರತಕ್ಕಂತಹ ಸಂದರ್ಭದಲ್ಲಿ ಅವರಿಗೆ ಕಾಂಪೆನ್‌ಸೇಷನ್ ಕೊಡುವುದಕ್ಕೆ ಸಾಧ್ಯವಾದರೆ ಕೊಡಬೇಕು. ಮೂರು ಸಾವಿರ ಎಕರೆ ಇರತಕ್ಕಂಥಾದ್ದು. ಸರಕಾರ ಇಂತಹ ಕಷ್ಟ ಸಂದರ್ಭದಲ್ಲಿ ನಿಮ್ಮ ಜೊತೆಯಲ್ಲಿ ನಾವು ಇದ್ದೇವೆಂದು ಹೇಳಿದ ಹಾಗಾಗುತ್ತದೆ ಮತ್ತು ಸರಕಾರಕ್ಕೆ ಕೂಡ ಒಳ್ಳೆ ಹೆಸರು ಬರುತ್ತದೆಂದು ಸಲಹೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಗೊತ್ತಿರುವ ಹಾಗೆ ರೈತರು ಪರಿಹಾರವನ್ನು ಪ್ರತಿಯೊಂದು ಸಂದರ್ಭದಲ್ಲಿ ಕೇಳುವುದಕ್ಕೆ ಬರುವುದಿಲ್ಲ. ಅವರು ಬಹಳ ಪ್ರಾಮಾಣಿಕರಿದ್ದಾರೆ. ರಾಯಚೂರು ಬಳ್ಳಾರಿ ಈ ಎರಡು ಜಿಲ್ಲೆಗಳನ್ನು ಬಿಟ್ಟರೆ ಉಳಿದಂತಹ ಕಡೆಗಳಲ್ಲಿ ಚೆನ್ನಾಗಿ ಮಳೆ ಆಗಿದೆ. ಎಲ್ಲೂ ಬರ ಎಂದು ಯಾರೂ ಹೇಳುವುದಿಲ್ಲ. ನೆಮ್ಮದಿಯಿಂದ ಇರುತ್ತಾನೆ ಅವರು ರಸ್ತೆಗೆ ಬರುವುದಿಲ್ಲ. ಇದೊಂದು ವಿಶೇಷವಾದ ಸಂದರ್ಭದಲ್ಲಿ ಟೊಮೇಟೋವನ್ನು ಬೆಳೆದು ಅವರು ಬೀದಿಗೆ ಬಂದಿದ್ದಾರೆ. ಹಾಪ್‌ಕಾಮ್ಸ್‌ನಿಂದ ಎರಡು ಒಂದೂವರೆ ರೂಪಾಯಿಗೆ ಟೊಮೇಟೋವನ್ನು ಖರೀದಿ ಮಾಡುವ ಯೋಚನೆ ಇದೆ ಎಂದು ತಿಳಿಯಿತು. ಅದರ ಬದಲು 5 ರೂಪಾಯಿಯನ್ನು 1 ಕೆ.ಜಿ.ಗೆ

ಕೊಟ್ಟು, ಆ ಸ್ಪಾಟ್‌ನಿಂದ ಖರೀದಿ ಮಾಡಿ ಒಂದು ಸಾರಿ ರಕ್ಷಣೆ ಕೊಟ್ಟು ಟೊಮೇಟೋ ಬೆಳೆಗೆ ಪರಿಹಾರ ಕೊಟ್ಟರೆ, ಅವನು ಆ ಬೆಳೆ ಬೆಳೆದಿದ್ದರಿಂದ ರಕ್ಷಣೆ ಪಡೆಯುತ್ತಾನೆ. ಬಹಳ ದೊಡ್ಡ ಪ್ರಮಾಣದಲ್ಲಿ ಟೊಮೇಟೋ ಬೆಳೆದಿದೆ ಒಳ್ಳೆಯ ಆದಾಯ ಈ ಸಲ ಇತ್ತು ಅದನ್ನು ತಾವು ಖರೀದಿ ಮಾಡಿ ಒಂದು ಸಲ ಅವನನ್ನು ರಕ್ಷಣೆ ಮಾಡಿ, ಒಂದು ಸಲ ಅವನಿಗೆ ಪರಿಹಾರ ಕೊಡಿ. ತಮಗೆ ಗೊತ್ತಿರುವ ಹಾಗೆ 25-30 ವರ್ಷದಲ್ಲಿ ಒಂದು ಸಲ ಮಾತ್ರ ತೊಗರಿ ಬೇಳೆ ಹಾಳಾಗಿರುವುದಕ್ಕೆ ಒಂದು ಸಲ ಪರಿಹಾರ ಕೊಟ್ಟೆವು. ವಿಶೇಷವಾಗಿ ಕೆಟ್ಟ ರೋಗ ಬಂದುದಕ್ಕಾಗಿ ಪರಿಹಾರ ಕೊಟ್ಟೆವು. ಹಾಗಾಗಿ ಮತ್ತೆ ಪ್ರಸ್ತಾಪ ಮಾಡಲಿಲ್ಲ. ಇನ್ನೊಂದು ಸಲ ವಿಶೇಷವಾದ ಪ್ರಕರಣವೆಂದು ಪರಿಗಣಿಸಿ ಅಲ್ಲಿಯೇ ಸಚಿವರ ಇದ್ದಾರೆ ಅವರಿಗೆ ವಿಶೇಷವಾಗಿ ಹಣ ಕೊಟ್ಟು ಖರೀದಿಯನ್ನು ಮಾಡಿ. ಬೆಂಗಳೂರಿನಲ್ಲಿ ಹೋಗಿ ಕೇಳಿ ನಮ್ಮ ಮನೆಯಲ್ಲಿ ನಿನ್ನೆ ಟೊಮೇಟೋ ತರಿಸಿದ್ದೆವು 8 ರೂಪಾಯಿ ಕೆಜಿ ಇದೆ. ಕಡಿಮೆ ಏನೂ ಇಲ್ಲ. ಆದರೆ ರೈತರಿಗೆ ಸಿಗದ ಹಾಗಾಗಿದೆ. ದಯಮಾಡಿ ಇಲ್ಲಿಗೆ ಬರುವ ಹಾಗೆ ಮಾಡಿಕೊಂಡು ಅವನಿಗೆ ಹೆಚ್ಚು ಬೆಲೆ ಕೊಟ್ಟು ಹಾಳಾಗಿರುವವರಿಗೆ ಏನಾದರೂ ಅನುಕೂಲ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡಬಹುದೇ ವಿಚಾರ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಟೊಮೇಟೋ ಬೆಳೆ ಹಾಳಾಗಿದ್ದಕ್ಕೆ ಯಾವ ರೀತಿಯಾಗಿ ನಾವು ಕಾಂಪನ್‌ಸೇಷನ್ ಕೊಡಬೇಕು ಯಾವ ರೀತಿಯಾಗಿ ಅವರಿಗೆ ಸಹಾಯ ಮಾಡಬೇಕೆನ್ನುವ ಬಗ್ಗೆ ಪ್ರಸ್ತಾಪ ಮಾಡಿದ್ದರು. ತಾವು ಮಾಡಬಹುದು, ಹಾಪ್‌ಕಾಮ್ಸ್ ಸೊಸೈಟಿಗಳು ಇದ್ದೇ ಇದೆ. ಇದನ್ನು ಮಾಡಿದ್ದು ಅದೇ ಕಾರಣಕ್ಕೆ. ಆದರೆ ಅದರಿಂದ ಬಗೆಹರಿಯದಿದ್ದರೆ ಅಥವಾ ಬಹಳಷ್ಟು ನಮ್ಮ ಹತ್ತಿರ ಡೀಫ್ ಫ್ರೀಜರ್ಸ್ ಅಥವಾ ಹಾಪ್‌ಕಾಮ್ಸ್ ಗೋಡೌನ್ ಇಲ್ಲದಿದ್ದರೆ, ಕನಿಷ್ಟ ಪಕ್ಷ ಒಂದು ಎಕರೆಗೆ ಇಂತಿಷ್ಟಾದರೂ ಕಾಂಪನ್‌ಸೇಷನ್ ಕೊಡಬೇಕು. ಒಂದು ಎಕರೆಗೆ 2000-1000 ಎಂದು ನಿಗದಿ ಮಾಡಿ ಪರಿಹಾರ ಕೊಟ್ಟರೆ, ಅವರಿಗೆ ಸಹಾಯವಾಗುತ್ತದೆ. ಹಿಂದೆ ಈ ರೀತಿ ಯಾರೂ ಕೊಟ್ಟಿಲ್ಲವೆಂದು ತಿಳಿದುಕೊಳ್ಳಬೇಡಿ. ಗುಲ್ಬರ್ಗಾದಲ್ಲಿ, ಬಿಜಾಪುರದಲ್ಲಿ ತೊಗರಿ ಬೇಳೆಗೆ ಹಾನಿಯಾದಾಗ ಪ್ರತಿ ಎಕರೆಗೆ 500 ರೂಪಾಯಿಯಂತೆ ನಾವು 10 ಕೋಟಿ ಹಣವನ್ನು ಕಾಂಪನ್‌ಸೇಷನ್ ಕೊಟ್ಟಿದ್ದೇವೆ. ಸೂರ್ಯಕಾಂತಿ ಬೆಳೆ ಹಾಳಾದಾಗ ಇಂಡಿ, ಬಿಜಾಪುರದ ಕೆಲವು ಭಾಗಗಳಲ್ಲಿ ಕೂಡ ಪ್ರತಿ ಎಕರೆಗೆ 250ರೂಪಾಯಿಯಂತೆ ಪರಿಹಾರ ಕೊಟ್ಟಿದ್ದೆವು. ನೀವು ಒಂದು ರೇಟ್ ಫಿಕ್ಸ್ ಮಾಡಿ. ಮೂರು ಸಾವಿರ ಎಕರೆಯಲ್ಲಿ ಇದು ಬೆಳೆದಿದ್ದಾರೆಂದು ತಿಳಿದು ಅವರಿಗೇನಾದರೂ ಪರಿಹಾರವನ್ನು ನೀವು ನಿಗದಿ ಮಾಡದೇ ಹೋದರೆ, ನಾಳೆ ಅವರು ಬದುಕುವುದು ಹೇಗೆ ಎಂದು ತಾವು ವಿಚಾರ ಮಾಡಬೇಕು.

ಶ್ರೀ ಜೆ.ಹೆಚ್. ಪಟೇಲ್ : ಅದು ಸರ್‌ಪ್ಲಸ್ ಅಲ್ಲ. ಹುಳ ಬಿದ್ದು ಹಾನಿಯಾಯಿತು ಎಂದು ನೀವು ಪರಿಹಾರವನ್ನು ಕೊಟ್ಟಿದ್ದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಜಾಸ್ತಿ ಬೆಳೆದು ಹಾನಿಯಾಗಿದೆ. ತೆಗೆದುಕೊಳ್ಳುವವರೇ ಯಾರೂ ಇಲ್ಲ, ಹಾಳಾಗಿದೆ. ಡಿಸ್ಟ್ರೆಸ್ ಎಂದರೆ ಏನು? ಅತಿವೃಷ್ಟಿಯೂ ಬಂತು, ಅನಾವೃಷ್ಟಿಯೂ ಬಂತು. ಇದು ಪೆರಿಷಬಲ್ ಗೂಡ್ಸ್. ನಿಮಗೆ ಗೊತ್ತಿರುವ ಹಾಗೆ ಉಳ್ಳಾಗಡ್ಡಿ, ಪೊಟಾಟೊ ನಮ್ಮ

ಟೊಮೇಟೊ ಪೆರಿಷಬಲ್ ಗೂಡ್ಸ್‌ಗೆ ಮಾರ್ಕೆಟ್ಟೇ ಇಲ್ಲ ಎಂದಾಗ you have to come to their rescue.

ಶ್ರೀ ಜೆ.ಹೆಚ್. ಪಟೇಲ್ : ಒನ್ ಟೈಮ್ ರಿಲೀಫ್ ಅಂತ ಅಲ್ಲಾ ನಾನು ಹೇಳುತ್ತಿರುವುದು. ಇದರ ಬಗ್ಗೆ ಏನಾದರೂ ಸರ್ಕಾರ ನಮ್ಮದ್ದೇ ಇರಲಿ, ನಿಮ್ಮದ್ದೇ ಇರಲಿ, ಯಾರದೇ ಇರಲಿ, can we do something on a permanent basis?

ಶ್ರೀ ಎಂ. ವೀರಪ್ಪ ಮೊಯಿಲಿ : ಸ್ವಾಮಿ, ಪರ್ಮನೆಂಟ್ ಬೇಸಿಸ್‌ಗೆ ನಾನು ಸಜೆಸ್ಟ್ ಮಾಡುತ್ತಿಲ್ಲ. ಅದರ ಬಗ್ಗೆ ಕುಳಿತು ಆಲೋಚನೆ ಮಾಡಬೇಕು. ನಾನು ಹೇಳುವ ಸೂಚನೆಯನ್ನು ವಿಚಾರ ಮಾಡಿ. ಏಕೆಂದರೆ ಸ್ವಲ್ಪಮಟ್ಟಿಗಾದರೂ ಪ್ರಿಸರ್ವ್ ಮಾಡುವ ಆಲೋಚನೆ. ಏಕೆಂದರೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಕೋಲ್ಡ್ ಸ್ಟೋರೇಜಸ್ ಇದೆ. ಈಗ ಹೆಚ್ಚು ಮೀನನ್ನು ಹಿಡಿಯುವುದಿಲ್ಲ.

ಶ್ರೀ ಸಿ. ಬೈರೇಗೌಡ : ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟರೂ ಕೂಡ ಕೆಟ್ಟು ಹೋಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಇಮ್ಮೀಡಿಯೇಟ್ ಆಗಿ ರಿಪ್ಲೈ ಕೊಡಿ. ಆದರೆ ಈ ವಿಷಯದ ಬಗ್ಗೆ ಒಂದು ಸೂಚನೆಯನ್ನು ನಾನು ಕೊಡುತ್ತಿರುವುದು. ಏಕೆಂದರೆ ಸಾಕಷ್ಟು ಸ್ಪೇರ್ ಕೆಪಾಸಿಟಿ ಇದೆ. ಈಗ ಮೀನನ್ನು ಅಲ್ಲಿ ದಾಸ್ತಾನು ಮಾಡುತ್ತಿಲ್ಲ. ಇನ್ನು ಒಂದು ತಿಂಗಳು ಮೀನು ಕೂಡ ಹಿಡಿಯುವುದಿಲ್ಲ. ಇದರ ಬಗ್ಗೆ ವಿಚಾರ ಮಾಡಿ. ಬಹುಶಃ ಇದನ್ನು ಹೇಗೆ ಮಾಡಲಿಕ್ಕೆ ಆಗುತ್ತದೆ ಎಂದು ನೋಡಿ. ಬಹುಶಃ 10-15 ದಿವಸ ಆದಷ್ಟು ನೀವು ಆ ಬೆಳೆ ಉಳಿಸಲಿಕ್ಕೆ ನೀವು ಪ್ರಯತ್ನಮಾಡಿದರೆ ಬಹುಶಃ ರೈತ ಬದುಕಿಕೊಳ್ಳುತ್ತಾನೆ. ಪರಿಹಾರ ಯಾವ ರೀತಿಯಲ್ಲಿ ಕೊಡುತ್ತೀರೋ ಅದು ಪ್ರತ್ಯೇಕ. ಏಕೆಂದರೆ ಒಮ್ಮೆ ಕೋಲಾರ ಜಿಲ್ಲೆಯ ಆಲೂಗಡ್ಡೆಯನ್ನು ಆಂಧ್ರಪ್ರದೇಶದ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಾಗ ಅವರ ಮಿಸ್ಟೇಕ್‌ನಿಂದ ಅದು ಕೊಳೆತುಹೋಯಿತು. ನಾವು ಏನು ಮಾಡಿದ್ದೇವೆ ಎಂದರೆ ಆ ರೈತರಿಗೆ ತೊಂದರೆಯಾಗಬಾರದು ಎಂದು ಹೇಳಿ ಸುಮಾರು 40-45 ಲಕ್ಷ ರೂಪಾಯಿ ಅವರಿಗೆ ಪರಿಹಾರಕೊಟ್ಟೆವು. ಈ ರೀತಿ ಎಲ್ಲದಕ್ಕೂ ಪರಿಹಾರ ಕೊಡಲಿಕ್ಕಾಗುವುದಿಲ್ಲ. ಆದರೆ ಎಷ್ಟರಮಟ್ಟಿಗೆ ಇದನ್ನು ಪ್ರಿಸರ್ವ್ ಮಾಡಬಹುದು, ಬಹುಶಃ 10-15 ದಿವಸ ನೀವು ಇದನ್ನು ಪ್ರಿಸರ್ವ್ ಮಾಡುವ ಎಲ್ಲಾ ವ್ಯಾಪಕ ಕಾರ್ಯಕ್ರಮವನ್ನು ಯಾವ ರೀತಿ ತೆಗೆದುಕೊಳ್ಳುತ್ತೀರೋ ಆಲೋಚನೆ ಮಾಡಿ. ಪ್ರಿಸರ್ವ್ ಮಾಡಿದರೆ ಸ್ವಲ್ಪ ರೈತರಾದರೂ ಬದುಕಿಕೊಳ್ಳುತ್ತಾರೆ ಎಂದು ಹೇಳುವುದು.

ಶ್ರೀ ಜೆ.ಹೆಚ್. ಪಟೇಲ್ : ನಾರ್ವೆ, ಸ್ವೀಡನ್ ಮತ್ತು ಡೆನ್‌ಮಾರ್ಕ್‌ಗಳಲ್ಲಿ ಬರೀ ಹೂವು ಬೆಳೆಯುತ್ತಾರೆ. ಒಬ್ಬರು ಬರೀ ದನವನ್ನು ಸಾಕುತ್ತಾರೆ, ಬೇರೆ ಕಡೆ ಪ್ರಿಸರ್ವ್ ಮಾಡುತ್ತಾರೆ. ಅದಕ್ಕೆ ನಾನು ಬೈರೇಗೌಡರಿಗೆ ಹೇಳಿದೆ. ಬಿಜಾಪುರ ಮತ್ತು ಕೋಲಾರ ಇವರೆಡು ಇವತ್ತು ತೋಟಗಾರಿಕೆಯಲ್ಲಿ ಎಲ್ಲಾ ಜಿಲ್ಲೆಗಳಿಗಿಂತ ಮುಂದೆ ಬರುತ್ತಿವೆ. ನಾವು ಹಣ್ಣನ್ನು ಯಾವ ದೇಶಕ್ಕೆ ಕಳುಹಿಸಬೇಕೋ ಆ ದೇಶಕ್ಕೆ ಕಳುಹಿಸಿದರೆ, ನಮ್ಮ ರೈತನೂ ಉಳಿದುಕೊಳ್ಳುತ್ತಾನೆ. ಅದಕ್ಕೆ ಬೆಲೆಯೂ ಸಿಗುತ್ತದೆ. ಈಗ ಅದಕ್ಕೆ ಕಾರ್ಗೋ ಸಿಸ್ಟಂ ಮತ್ತೊಂದು ನಾವು ಇಂಟರ್‌ನ್ಯಾಷನಲ್ ಮಾರ್ಕೆಟ್‌ನ ಸಂಪರ್ಕ ಇಟ್ಟುಕೊಳ್ಳದೆ ಮಾಡುವುದು ಹೇಗೆ? ನನಗೆ ಒಂದು ಮೊನ್ನೆ ಅನುಭವ ಆಯಿತು. ನನ್ನ ಜೊತೆಗೆ ದೆಹಲಿಯಿಂದ

ಬರುತ್ತಾ ನನ್ನ ಮಗ್ಗುಲಲ್ಲಿ ಒಬ್ಬರು ಕುಳಿತಿದ್ದರು. ನಾನು ಗೌಡರಿಗೆ ಹೇಳಿದೆ. ಆತ ಹೇಳಿದ, ನಾನು ಜರ್ಮನಿಯಲ್ಲಿದ್ದೇನೆ, ಫುಡ್ ಪ್ರೊಸೆಸಿಂಗ್ ಯೂನಿಟ್‌ನ್ನು ನಾನು ಸಿಂಗಪೂರ್‌ದಲ್ಲಿ ಇಟ್ಟುಕೊಂಡಿದ್ದೇನೆ. ಹಣ್ಣೆಲ್ಲಾ ನಾನು ಇಲ್ಲಿಗೆ ಬಂದು ಖರೀದಿ ಮಾಡುತ್ತೇನೆ ಎಂದನು. ಅಂದರೆ ಅವನ ಹತ್ತಿರ ಎಲ್ಲಾ ಡೀಪ್ ಫ್ರೀಜ್ ಸಿಸ್ಟಂ, ವಾಹನಗಳು ಎಲ್ಲಾ ಇಟ್ಟುಕೊಂಡಿದ್ದಾನೆ. ನಾನು ಒಪ್ಪುತ್ತೇನೆ. ಸರ್ಕಾರ ಈ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡು ರೈತ ಡಿಸ್ಟ್ರೆಸ್ ಸೇಲ್ ಮಾಡದಹಾಗೆ ತೆಗೆದುಕೊಂಡು ಸ್ಟೋರೇಜ್ ಮಾಡಿ, ಅದನ್ನು ಬೇಕಾದರೆ ಬೇರೆ ರಾಷ್ಟ್ರಗಳಿಗೆ ಲಾಭ ಇರಲಿ, ಲುಕ್ಸಾನು ಇರಲಿ ಅಥವಾ ಹಾಕಿದ ಬಂಡವಾಳಕ್ಕೆ ಮಾರಬೇಕು ಎನ್ನುವ ವ್ಯವಸ್ಥೆ ಮಾಡಬೇಕು ಎನ್ನುವ ಸಲಹೆಯನ್ನು ಒಪ್ಪುತ್ತೇನೆಯೇ ಹೊರತು, ತತ್‌ಕ್ಷಣ ಈಗ ಅಷ್ಟೊಂದು ನಾವು ಬಂಡವಾಳವನ್ನು ಹಾಕಿ ಮಾಡುವುದು ಹೇಗೆ? ಕೆಲವರು ಟೊಮೇಟೊ ಕೊಂಡುಕೊ ಎಂದರು. ಇನ್ನೊಬ್ಬರು ಹತ್ತಿ ಕೊಂಡುಕೊ ಅಂದರು. ಮತ್ತೊಬ್ಬರು ಮೆಣಸಿನಕಾಯಿ ಕೊಂಡುಕೊ ಎಂದರು. ಏನು ಕೊಂಡುಕೊಳ್ಳುತ್ತೀರಿ? Please tell us to do something which is pragmatic, which can be done...

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಹೇಳಿಬಿಡಲಿ. ಎಲ್ಲರೂ ಈ ರೀತಿ ಮಾಡಿದರೆ ಹೇಗೆ?

ಶ್ರೀ ಚಂದ್ರಕಾಂತ್ ಬೆಲ್ಲದ್ : ನಾನೊಂದು ಸಲಹೆ ಕೊಡುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸಲಹೆ ಕೇಳಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳಿಬಿಡಲಿ. ರೈತರ ಸಮಸ್ಯೆ ಎಂದು ಇಷ್ಟು ಜನರಿಗೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ತಮ್ಮ ನಾಯಕರೆಲ್ಲಾ ಮಾತನಾಡಿದ್ದಾರೆ. ಮಂತ್ರಿಗಳು ಉತ್ತರ ಹೇಳುತ್ತಾರೆ, ಕೇಳಿ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಮುಖ್ಯಮಂತ್ರಿಗಳಿಗೆ ರೈತರ ಬಗ್ಗೆ ಕಳಕಳಿ ಇದೆ. ಅದಕ್ಕೆ ಅವರು ಸಲಹೆಗಳನ್ನು ಕೇಳಿದ್ದಾರೆ. ಒಂದು ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ಬಿ.ಬಿ. ಶಿವಪ್ಪ : ಮುಖ್ಯಮಂತ್ರಿಗಳು ಸಲಹೆ ಕೇಳಿದ್ದಾರೆ. ಇಲ್ಲಿಯವರೆಗೆ ಯಾರೂ ಸಲಹೆ ಕೊಡಲಿಲ್ಲ. ಅದಕ್ಕೆ ಅವರೇನೂ ಸಲಹೆ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಿ. ಮುಖ್ಯಮಂತ್ರಿಗಳು ಯಾರು ಸಲಹೆ ಕೊಡಲಿಲ್ಲ ಎಂದು ಹೇಳುತ್ತಿದ್ದಾರಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನಲ್ಲಿ ಕಲಾಸಿಪಾಳ್ಯಂ ಮಾರುಕಟ್ಟೆಯಲ್ಲಿ ಹಣ್ಣು ಮತ್ತು ಹೂಗಳನ್ನು ಸಂರಕ್ಷಣೆ ಮಾಡುತ್ತೇವೆ, ಕೋಲ್ಡ್ ಸ್ಟೋರೇಜ್ ಮಾಡುತ್ತೇವೆ ಎಂದು ಹೇಳಿ ಪ್ಲಾನ್ ಸ್ಯಾಂಕ್ಷನ್ ಮಾಡಿದರು. ಎಲ್ಲಾ ಮಾರುಕಟ್ಟೆಯ ವ್ಯಾಪಾರಸ್ಥರನ್ನು ಅಲ್ಲಿಗೆ ಕಳುಹಿಸಿದಿರಿ. ಕೋಲ್ಡ್ ಸ್ಟೋರೇಜ್ ಮಾಡುತ್ತೇವೆ ಎಂದು ಹೇಳಿದ ಸ್ಥಳದಲ್ಲಿ ಇವತ್ತಿನ ದಿವಸ ಅಂಗಡಿಗಳನ್ನು ಕಟ್ಟಿದ್ದೀರಿ. ಕೋಲ್ಡ್ ಸ್ಟೋರೇಜ್ ಮಾಡಲಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ? ಹತ್ತು ವರ್ಷ ಆಯಿತು. ಇವತ್ತಿನವರೆಗೂ ಅವರು ಸಫರ್ ಮಾಡುತ್ತಿದ್ದಾರೆ ಏನೂ ಮಾಡಿಲ್ಲ. ಇವತ್ತು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಯಾರಾದರೂ ಸತ್ತರೆ ಹೆಣ ಇಡುವುದಕ್ಕೆ ನಮ್ಮಲ್ಲಿ ಕೋಲ್ಡ್ ಸ್ಟೋರೇಜ್ ಇಲ್ಲ.

ಉಪಾಧ್ಯಕ್ಷರು : ಈಗ ಚರ್ಚೆ ಇರುವುದು ಯಾವುದು? ತಾವು ಮಾತನಾಡುತ್ತಿರುವುದು ಯಾವುದು? ಸಲಹೆ ಕೊಡಿ ಎಂದು ಹೇಳಿದರೆ ತಾವು ಯಾವುದು ಹೇಳುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸೆಂಟ್ ಜಾನ್ ಆಸ್ಪತ್ರೆಯಲ್ಲಿ ಕೋಲ್ಡ್ ಸ್ಟೋರೇಜ್ ಇದೆ ಎಂದ ಅಲ್ಲಿಗೆ ಕಳುಹಿಸುತ್ತಾರೆ. ಅದಕ್ಕೂ ಕೋಲ್ಡ್ ಸ್ಟೋರೇಜ್ ಮಾಡಿ ಎಂದು ನಾನು ಹೇಳುತ್ತಿರುವುದು. ಹಣ್ಣಿನ ಜೊತೆಯೇ ಹೆಣಕ್ಕೂ ಕೋಲ್ಡ್ ಸ್ಟೋರೇಜ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ಇಲ್ಲಿ ಸರ್ಕಾರವೇ ಎಲ್ಲಾ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ಆದರೆ ಈಗ ತಕ್ಷಣದ ಪರಿಸ್ಥಿತಿ ಏನು, ಇವರು ಬಹಳ ಕಷ್ಟದಲ್ಲಿದ್ದಾರೆ. ತಕ್ಷಣಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ನಾಳೆ ನಾವು ಯಾವ ರೀತಿ ಮಾಡಬೇಕು? ಸರ್ಕಾರ ಕೊಂಡುಕೊಳ್ಳಬೇಕೇ ಬಿಡಬೇಕೇ ಯಾರಿಗೆ ಬಿಡಬೇಕು ಎನ್ನುವುದು ಆಮೇಲೆ. ಆದರೆ ತಕ್ಷಣ ಬೆಳೆದಿರುವ ಟೊಮೇಟೊ ಹಣ್ಣು ಮಾರುವುದಕ್ಕಾಗದೆ ರಸ್ತೆಯಲ್ಲಿ ಸುರಿಯುತ್ತಿದ್ದಾರೆ, ತಿಪ್ಪೆಯಲ್ಲಿ ಹಾಕುತ್ತಿದ್ದಾರೆ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ಸರಿಪಡಿಸುವುದಕ್ಕೆ, ರೈತರಿಗೆ ಆಗಿರುವ ತೊಂದರೆಯನ್ನು ಸರಿಪಡಿಸುವುದಕ್ಕೆ ಏನು ತಕ್ಷಣ ವ್ಯವಸ್ಥೆ ಆಗಬೇಕು. ಇದೇ ರೀತಿಯಾದರೆ ನನಗನಿಸುತ್ತದೆ, ಕರ್ನಾಟಕದಲ್ಲಿ ಟೊಮೇಟೊ ಹಣ್ಣೇ ಮಾಯವಾಗಿ ಹೋಗುತ್ತೆ. ಟೊಮೇಟೊ ಹಣ್ಣು ಸುಮಾರು 20 ಅಹಾರಗಳಿಗೆ ಅನುಕೂಲವಾಗುತ್ತದೆ. ಇದು ಮಾಯವಾಯಿತು ಎಂದರೆ ನಿಜವಾಗಲೂ ನಮಗೆ ನಷ್ಟವಾಗುತ್ತೆ ಹೊರತು ಲಾಭವೇನೂ ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾವೇನು ಸರ್ಕಾರವೇ ಎಲ್ಲಾ ತೆಗೆದುಕೊಳ್ಳಿ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಪರಿಹಾರವೇನು ಎನ್ನುವ ಬಗ್ಗೆ ಕುಳಿತು ಚರ್ಚೆ ಮಾಡಿ, ಈಗ ತುರ್ತಾಗಿ ಏನಾಗಬೇಕು, ಅದನ್ನು ಮಾಡಬೇಕು. ಮಾನ್ಯ ಬೈರೇಗೌಡರು ಮೂರು ವರ್ಷಗಳ ಹಿಂದೆ, ಈ ಕಡೆ ಇದ್ದರು, ಆಗ ವಿರೋಧ ಪಕ್ಷದಲ್ಲಿದ್ದರು. ಅವರು ಒಂದು ಲಾರಿ ಆಲೂಗಡ್ಡೆ ತಂದು ವಿಧಾನಸೌಧದ ಮುದಂ ಸುರಿದರು. ತಮಗೆ ಗೊತ್ತಿರಬೇಕು. ನಾನು ನಮ್ಮ ಕೃಷಿ ಸಚಿವರಿಗೆ ಜ್ಞಾಪಿಸುತ್ತಿದ್ದೇನೆ. ಈಗ ನಿಮಗೆ ಇವರು ಸುರಿದಿರುವ ಬಗ್ಗೆ ಅನುಕಂಪ ಇಲ್ಲ. ನೀವು ಸುರಿದಾಗ ಪರಿಸ್ಥಿತಿ ಹೇಗಿತ್ತು? ಅದನ್ನು ನೀವು ಸ್ವಲ್ಪ ಯೋಚನೆ ಮಾಡಬೇಕು. ಆದ್ದರಿಂದ ದಯಮಾಡಿ ತಾವು ಕನಿಷ್ಟ ಒಂದು ಎಕರೆಗೆ ಇಪ್ಪತ್ತು ಸಾವಿರ ರೂಪಾಯಿಯಾದರೂ ಪರಿಹಾರ ಕೊಡತಕ್ಕಂಥ ವ್ಯವಸ್ಥೆ ಸರ್ಕಾರ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಅಧ್ಯಕ್ಷರೆ, tomato is a perishable item ಎಂದು ಏನು ಹೇಳಿದ್ದಾರೆ ಇದು ನೂರಕ್ಕೆ ನೂರು ಸತ್ಯ. ಈ ಬಾರಿ 1 ಕೆ.ಜಿ. ಟೊಮೇಟೊ 50 ಪೈಸೆಗೆ ಬಂದಿದೆ. ಕಳೆದ ವರ್ಷ 1996ರ ಇದೇ ವೇಳೆಯಲ್ಲಿ ಟೊಮೇಟೊ 12 ರೂಪಾಯಿಯಿಂದ 15 ರೂಪಾಯಿವರೆಗೆ ಮಾರಾಟವಾಯಿತು. ಕಾರಣ ಏನು ಎಂದರೆ ಈ ಬಾರಿ ಬೆಂಗಳೂರು ಸುತ್ತಮುತ್ತಲೂ ಇರತಕ್ಕಂಥ ತುಮಕೂರು, ಕೋಲಾರ, ಆನೇಕಲ್ ಈ ಕಡೆಗಳಲ್ಲಿ ಮಳೆ ಇಲ್ಲ. ಮಳೆ ಬಿದ್ದದ್ದು ಶರಾವತಿ ಬೈಲಿನಲ್ಲಿ. ರೈತರು ಏನು ಮಾಡಿದರು ಎಂದರೆ ಇದ್ದ ಅಲ್ಪಸ್ವಲ್ಪ ಜಮೀನಿನಲ್ಲಿ ಪವರ್ ಸರಿಯಾಗಿ ಪೂರೈಕೆ

ಆಗಿದ್ದರಿಂದ, ಪಂಪ್‌ಸೆಟ್ ಉಪಯೋಗ ಮಾಡಿಕೊಂಡು ಆದಷ್ಟೂ ಪ್ರಯತ್ನ ಮಾಡಿ ಒಳ್ಳೆಯ ಉತ್ಪದನೆ ಮಾಡಿದರು. ಇದಕ್ಕೆ ಕಾರಣವೇನೆಂದರೆ ಮಳೆ ಜಾಸ್ತಿಯಾಗಿದ್ದರೆ ಟೊಮೇಟೊ ಶೇಕಡ 50 ರಷ್ಟು ಕೆಟ್ಟುಹೋಗುತ್ತಿತ್ತು. ಆದುದರಿಂದ ಟೊಮೇಟೊ ಕೆಡಲಿಲ್ಲ. ಇದರಿಂದ ಉತ್ಪಾದನೆ ಜಾಸ್ತಿಯಾಯಿತು. ಎರಡನೆಯದಾಗಿ ಟೊಮೇಟೊದಲ್ಲಿ ಅವಿನಾಶ್ ಎಂಬ ಒಂದು ವಿಧದ ತಳಿ ಬಂದಿದೆ. ಇದರಿಂದ ಎಕರೆಗೆ ಸುಮಾರು 10-20 ಟನ್ ಟೊಮೇಟೊ ಬೆಳೆಯುತ್ತಿದ್ದಾರೆ. ನೋಡಿ ಸ್ವಾಮಿ, ಆಷಾಡ ತಿಂಗಳಿನಲ್ಲಿ ಮದುವೆಗಳು ಆಗುವುದಿಲ್ಲ. ಬೆಂಗಳೂರು ಸಿಟಿಯಲ್ಲಿ ಕಡಿಮೆ ಎಂದರೆ ಒಂದು ದಿನಕ್ಕೆ ಸಾವಿರ ಮದುವೆಗಳಾಗುತ್ತವೆ. 1000 x100 ಎಂದರೆ 10 ಸಾವಿರ ಕೆಜಿ ಟೊಮೇಟೊ ಮಾರಾಟವಾಗುತ್ತಿತ್ತು. ಆದರೆ ಬೆಂಗಳೂರಿನಲ್ಲಿ ಮದುವೆಗಳಾಗದ ಕಾರಣ ಪ್ರತಿದಿನ 10 ಲೋಡ್ ಟೊಮೇಟೊ ಕೂಡ ಮಾರಾಟವಾಗುತ್ತಿಲ್ಲ. ಇದು ಒಂದು ಮೇಜರ್ ಡಿಫೆಕ್ಟ್. ಎರಡನೆಯದು ಈ ಟೊಮೇಟೊ ಉಪಯೋಗಿದಿಂದ ಕ್ಯಾನ್ಸರ್ ಬರುತ್ತದೆ ಎಂದು ಹೇಳಿದ್ದಾರೆ. ಟೊಮೇಟೊ ತಿಂದರೆ ಕ್ಯಾನ್ಸರ್ ಬರುವುದಿಲ್ಲ. ಇದು ನೂರಾರು ವರ್ಷಗಳಿಂದ ಇರುವಂಥಾದ್ದು. It contains A and C Vitamins which is very much required for our body. It is a very good vitaminous food.

(ಗೊಂದಲ)

ಉಪಾಧ್ಯಕ್ಷರು : ಅವರ ವಿಚಾರಕ್ಕೆ ತಕ್ಕ ಹಾಗೆ ಅವರು ಮಾತನಾಡುತ್ತಾರೆ, ನಿಮ್ಮ ವಿಚಾರಕ್ಕೆ ತಕ್ಕಂತೆ ನೀವು ಮಾತನಾಡಿ.

ಶ್ರೀ ಎಂ.ಸಿ. ನಾಣಯ್ಯ : ಇದು ಅಲ್ಲ. ಅವರು ಹೇಳಿದ್ದನ್ನು ನಾವು ಕೇಳಿದ್ದೇವೆ. ಒಬ್ಬರು ಎದ್ದರೆ ಎಲ್ಲರೂ ಎದ್ದುಬಿಡುತ್ತಾರೆ.

(Interruptions)

ಶ್ರೀ ಹೆಚ್. ಶಿವಪ್ಪ : ಸಭಾಧ್ಯಕ್ಷರೆ ಅವರು ಹೇಳಿದ್ದನ್ನು ಬೆಳಗಿನಿಂದ ನಾವು ಕೇಳಿದ್ದೇವೆ. ನಾವು ಹೇಳುವುದನ್ನೂ ಸ್ವಲ್ಪ ಕೇಳಿ. It is not one way traffic.

ಶ್ರೀ ಎನ್. ರಾಜಣ್ಣ : ಒಂದು ಪರ್ಯಾಯ ವ್ಯವಸ್ಥೆ ಏನೆಂದರೆ ರೈತರು ಪ್ರೊಡ್ಯೂಸ್ ಮಾಡತಕ್ಕಂಥ ಟೊಮೇಟೊದಿಂದ ಕ್ಯಾನ್ಸರ್‌ಬರುವುದಿಲ್ಲ ಎಂಬುದನ್ನು ಸಂಬಂಧಪಟ್ಟ ವೆಜಿಟೇರಿಯನ್ ಡಾಕ್ಟರ್ ಸಲಹೆ ಮಾಡಬೇಕಾಗುತ್ತದೆ. Instead of regular feed they can supplement with 20 Kgs. tomatoes. ದಿನಕ್ಕೆ ಒಬ್ಬ ರೈತ 20 ಕೆಜಿ ಆಹಾರವನ್ನು ಒಂದು ಹಸುವಿಗೆ ಹಾಕುವುದರಲ್ಲಿ 50 ಪರ್ಸೆಂಟ್ ಕಡಿತ ಮಾಡಿ 5 ರಿಂದ 10 ಕೆಜಿ ಟೊಮೊಟೊ ಹಾಕಿದರೆ ಹಾಲು ಅಧಿಕವಾಗುತ್ತದೆ ಮತ್ತು ಹಸು ಕೂಡ ಆರೋಗ್ಯವಾಗಿರುತ್ತದೆ. ಅಲ್ಲದೆ ಹಸು ಉತ್ತಮ ಗೊಬ್ಬರವನ್ನೂ ಕೊಡುತ್ತದೆ. ಅದು ಬೇಸಾಯಕ್ಕೂ ಉಪಯುಕ್ತ. ಕೊನೆಯದಾಗಿ ಪ್ರೊಸೆಸಿಂಗ್ ಯೂನಿಟ್ಸ್ ಬಹಳ ಮುಖ್ಯ. ಇವುಗಳನ್ನು ನಮ್ಮ ಸರ್ಕಾರ ದಿಡೀರ್ ಎಂದು ಮಾಡುವುದಕ್ಕಾಗುವುದಿಲ್ಲ. We can produce tomato ketchup and sauce. Try to distribute among farmers and see that it is used as animal feed.

ಶ್ರೀ ಚಂದ್ರಕಾಂತ್ ಬೆಲ್ಲದ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಟೊಮೇಟೋ ಬೆಳೆದಂಥ, ಈರುಳ್ಳಿ ಬೆಳೆದಂಥ ಅಥವಾ ಆಲೂಗಡ್ಡೆ ಬೆಳೆದಂಥ ರೈತರ ಬಗ್ಗೆ ಹಾಗೂ ಪೆರಿಷಬಲ್ ಗೂಡ್ಸ್ ಎಂದು ಏನು ಬೆಳೆಯುತ್ತಾರೆ ಅವನ್ನು ಬೆಳೆಯುವಂಥ ರೈತರ ಬಗ್ಗೆ ಏನು ಮಾಡಬೇಕು ಎಂಬ ಸಲಹೆಯನ್ನು ಕೇಳಿದ್ದಾರೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಹವಾಮಾನ ಮತ್ತು ಭೂಗುಣ ಇರುವುದರಿಂದ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಬೆಳೆಗಳು ಉತ್ತಮವಾಗಿ ಬೆಳೆಯುವಂಥ ಪ್ರದೇಶಗಳನ್ನು ಗುರುತಿಸಿ, ಆ ಜಿಲ್ಲೆಗಳಿಗೆ ಮಾತ್ರ ಆಯಾ ಬೆಳೆಗಳನ್ನು ಬೆಳೆಯಲು ಸಲಹೆ ಮಾಡಬೇಕು. ಟೊಮೇಟೊ ಬೆಳೆಯುವಂಥ ಪ್ರದೇಶ, ಜಿಲ್ಲೆ ಎಂದು ನಿರ್ಧಿಷ್ಟವಾದ ಒಂದು ಪ್ರದೇಶ ಇದೆ. ಅದೇ ರೀತಿ ಆಲೂಗಡ್ಡೆ, ಈರುಳ್ಳಿ, ಮೆಣಸಿನಕಾಯಿ ಬೆಳೆಯುವಂಥ ಪ್ರದೇಶ, ಜಿಲ್ಲೆ ಎಂದು ಇದೆ. ಅಲ್ಲಿಗೆ ಬೇಕಾಗುವಂಥ ಸಂಸ್ಕರಣ ಮಾಡುವಂಥ ಉದ್ಯಮಗಳನ್ನು ಸಹಕಾರ ರಂಗದಲ್ಲೇ ಆಗಲಿ, ಖಾಸಗಿ ರಂಗದಲ್ಲೇ ಆಗಲಿ ಯಾರಾದರೂ ಮಾಡಲಿಕ್ಕೆ ಮುಂದೆ ಬಂದರೆ, ಅವರಿಗೆ ಹೆಚ್ಚಿನ ಧನಸಹಾಯವನ್ನು ಮಾಡಲು ಸರ್ಕಾರ ಮುಂದೆ ಬರಬೇಕು. ಏಕೆಂದರೆ ಎಲ್ಲವನ್ನೂ ಸರ್ಕಾರ ಮಾಡುವುಕ್ಕಾಗುವುದಿಲ್ಲ. ಸರ್ಕಾರದ ಉದ್ದಿಮೆಗಳು ಇವುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಕೊ-ಅಪರೇಷನ್‌ನವರು ಅಥವಾ ಖಾಸಗಿಯವರು ಮುಂದೆ ಬಂದರೆ ಅವರಿಗೆ ಹೆಚ್ಚಿನ ಧನಸಹಾಯ ಮಾಡಬೇಕು. ಇವೊತ್ತು ಎಲ್ಲೆಲ್ಲಿ ಯಾವ ಯಾವ ಬೆಳೆಗಳಿಗೆ ಕೋಲ್ಡ್ ಸ್ಟೋರೇಜ್ ಅಗತ್ಯ ಇದೆ, ಆ ಜಿಲ್ಲೆ ಅಥವಾ ತಾಲ್ಲೂಕನ್ನು ಗುರುತಿಸಿ ಈಗ ಯಾವ ರೀತಿ ಉದ್ಯಮಗಳಿಗೆ 15 ಪರ್ಸೆಂಟ್, 20 ಪರ್ಸೆಂಟ್, 25 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದಾರೆ, ಆ ರೀತಿ ರೈತರ ಸಂರಕ್ಷಣೆಗೆ, ಆರ್ಥಿಕ ಬೆಳವಣಿಗೆಗೆ ಈ ಪ್ರಕಾರ ಕೋಲ್ಡ್ ಸ್ಟೋರೇಜ್ ಮಾಡುವವರಿಗೆ ಸಂಸ್ಕರಣ ಉದ್ಯಮಗಳನ್ನು ಮಾಡುವಂಥವರಿಗೆ ಸಬ್ಸಿಡಿ ಕೊಡುವಂಥ ಯೋಜನೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ಕೋಲ್ಡ್ ಸ್ಟೋರೇಜ್‌ಗಳ ಮತ್ತು ಸಂಸ್ಕರಣ ಮಾಡುವಂಥ ಉದ್ಯಮಗಳ ಅವಶ್ಯಕತೆ ಇದೆ. ಕೇವಲ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರೆ ಸಾಲದು, ಅದೇ ಪ್ರಕಾರ ಈರುಳ್ಳಿ, ಆಲೂಗಡ್ಡೆ, ಟೊಮೇಟೊ ಇಂಥ ತೋಟಗಾರಿಕೆ ಬೆಳೆಗಳನ್ನು ಬೆಳೆಯುವಂಥ ಪ್ರದೇಶಗಳಲ್ಲಿ ಅಂಥ ಉದ್ಯಮಗಳ ಸ್ಥಾಪನೆಗೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ, ಮುಖ್ಯಮಂತ್ರಿಗಳ ಮೂಲಕ ಕೃಷಿ ಮಂತ್ರಿಗಳು ಮತ್ತು ತೋಟಗಾರಿಕೆ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ, ಧನ್ಯವಾದಗಳು.

ಶ್ರೀ ಡಿ.ಆರ್. ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಏನಾದರೂ ಒಂದು ಸಲಹೆ ಕೊಡಿ ಎಂದು ಹೇಳಿದ್ದಾರೆ. ಆಹಾರಧಾನ್ಯಗಳು, ಎಣ್ಣೆ ಕಾಳುಗಳು, (ಕಬ್ಬು), ಹತ್ತಿ ಇವುಗಳಿಗೆ ಬೆಂಬಲ ಬೆಲೆಯನ್ನು ನಿಗದಿ ಮಾಡಿದ್ದಾರೆ. ಅದೇ ರೀತಿ ಹಣ್ಣು ಮತ್ತು ತರಕಾರಿಗಳಿಗೂ ರಾಷ್ಟ್ರ ಮಟ್ಟದಲ್ಲಿ ಬೆಂಬಲ ಬೆಲೆ ನಿಗದಿಗೊಳಿಸಿ bidding below that price is a crime ಎಂದು ಮಾರ್ಕೆಟಿಂಗ್ ಆ್ಯಕ್ಟ್‌ಗೆ ಅಮೆಂಡ್‌ಮೆಂಟ್ ತಂದರೆ, ಅನೇಕ ಸಮಸ್ಯೆಗಳು ನಿವಾರಣೆಯಾಗುತ್ತವೆ.

SRI J.H. PATEL : Can you enforce it?

SRI D.R. PATIL : For foodgrains and oil seeds they are enforcing it in Madhya Pradesh.

ಶ್ರೀ ಜೆ.ಹೆಚ್. ಪಟೇಲ್ : ಸಪೋರ್ಟ್ ಪ್ರೈಸನ್ನು ಕೇಂದ್ರ ಸರ್ಕಾರ ಮಾಡುತ್ತದೆ, ಸ್ಟೇಟ್ ಅಡ್ವೈಸರಿ ಪ್ರೈಸ್ ಎಂದು ನಾವು ಮಾಡುತ್ತೇವೆ. ಇದಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದರೆ ನಾವು ಅವರ ಮೇರೆ ಕ್ರಿಮಿನಲ್ ಕೇಸ್ ಹಾಕುವುದಾಗಲಿ, ಎನ್‌ಫೋರ್ಸ್‌ಮೆಂಟ್ ಹಾಕುವುದಾಗಲಿ ಸಾಧ್ಯವಿಲ್ಲ. We have not been able to book criminal cases. As far as enforcement is concerned, you are quite aware of the legal situation. Under what provision I can prosecute them? Please tell me.

SRI D.R. PATIL : They have amended the Marketing Act in Madhya Pradesh. Tendering below that price is a crime. At the national level if a policy is evolved you can enforce it.

ಶ್ರೀ ಡಿ.ಆರ್. ಪಾಟೀಲ್ : ಯಾರೂ ಟೆಂಡರು ಕರೆಯುವುದಿಲ್ಲ ಎಂದರೆ ಯಾರಿಗೂ ರಾಗಿ ಜೋಳ ಬೇಡವೆ? ಊಟವಿಲ್ಲದೆ ಕುಳಿತುಕೊಳ್ಳಲು ಯಾರಿಗೂ ಸಾಧ್ಯವಿಲ್ಲ.

ಶ್ರೀ ವಿಜಯ ಶಂಕರ್ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸಲಹೆಗಳನ್ನು ಕೇಳಿದ್ದಾರೆ. ಈಗಾಗಲೇ ಅನೇಕ ಹಿರಿಯ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಸದನಕ್ಕೆ ಕೊಡುವಂಥಾದ್ದು ಎರಡು ಸಲಹೆಗಳನ್ನು ಮಾತ್ರ. ಸರ್ಕಾರಕ್ಕೆ ನೀವು ಕರ್ನಾಟಕ ರಾಜ್ಯಾದ್ಯಂತ ಇರುವ ಯಾವುದೇ ಮಾರುಕಟ್ಟೆ ಪಟ್ಟಿಯನ್ನು ಕೊಡಿ ಅಲ್ಲಿ ನಿಮ್ಮ ಅಧಿಕಾರಿಗಳ ದರ್ಬಾರು ಇಲ್ಲ, ಬೆಳೆಯನನ್ನು ಬೆಳೆದು ಮಾರುಕಟ್ಟೆಗೆ ತಂದಂಥ ರೈತನ ದರ್ಬಾರು ಇಲ್ಲ. ಅಲ್ಲಿರುವುದು ದಳ್ಳಾಳಿಗಳ ದರ್ಬಾರು. ಪ್ರತಿಯೊಂದು ಮಾರುಕಟ್ಟೆಗಳು ಅವರ ಕೈಯಲ್ಲಿ ಸಿಕ್ಕಿಕೊಂಡಿವೆ. ದಯವಿಟ್ಟು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಮಾರುಕಟ್ಟೆ ವ್ಯವಸ್ಥೆ. ರೈತ ಬೆಳೆದಂಥ ಬೆಳೆಗೆ ಯೋಗ್ಯ ಮಾರುಕಟ್ಟೆಯನ್ನು ಸರ್ಕಾರ ಇದುವರಗೆ ರೂಪಿಸಿಲ್ಲ. ಉದಾಹರಣೆಗೆ ನಮ್ಮ ಭಾಗದ ರೈತರು ಹತ್ತಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಲಿ ಅವರಿಗೆ ಯೋಗ್ಯವಾದ ಮಾರುಕಟ್ಟೆ ಇಲ್ಲ. ಅವರು ಅದನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗಬೇಕು. ಅದರಂತೆಯೇ ಇಲ್ಲಿ ಹೆಚ್ಚು ಅರಿಶಿಣವನ್ನು ಬೆಳೆಯುತ್ತಿದ್ದಾರೆ, ಬೆಳೆದಂಥ ಅರಿಶಿಣವನ್ನು ತಮಿಳುನಾಡಿಗೆ ತೆಗೆದುಕೊಂಡು ಹೋಗಬೇಕು. ಅದೇ ರೀತಿ ನಮ್ಮಲ್ಲಿ ಹೊಗೆಸೊಪ್ಪನ್ನು ಅತ್ಯಂತ ಹೆಚ್ಚಾಗಿ ಬೆಳೆಯುತ್ತಾರೆ. ಅದನ್ನು ಆಂಧ್ರಕ್ಕೆ ತೆಗೆದುಕೊಂಡು ಹೋಗಬೇಕು. ಈ ರೀತಿ ರೈತರು ಬೆಳೆದದಂಥ ಬೆಳೆಗೆ ಯೋಗ್ಯವಾದ ಮಾರುಕಟ್ಟೆ ವ್ಯವಸ್ಥೆಯನ್ನು ಸರ್ಕಾರರ ಮಾಡಿಲ್ಲ. ಈ ವ್ಯವಸ್ಥೆಯನ್ನು ಎಲ್ಲಿಯವರೆಗೆ ಸರ್ಕಾರ ಮಾಡುವುದಿಲ್ಲ ಅಲ್ಲಿಯವರೆಗೆ ರೈತರಿಗೆ ನ್ಯಾಯ ಸಿಗುವುದಿಲ್ಲ. ಆ ಕಾರಣಕ್ಕೋಸ್ಕರ ಸರ್ಕಾರದಲ್ಲಿ ನನ್ನ ವಿನಂತಿ ಇದೆ. ರೈತ ಬೆಳೆದಂಥ ಬೆಳೆಗೆ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಿ ದಳ್ಳಾಳಿಗಳ ಹೊಡೆತದಿಂದ ರೈತರನ್ನು ಮುಕ್ತರನ್ನಾಗಿ ಮಾಡಿ.

5.10 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಮೊಯಿಲಿಯವರು ಹಾಗೂ ಖರ್ಗೆಯವರು I think you have also read about controlled market and free market. ಒಬ್ಬ ಕೋಲ್ ಮೈನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ. ಅದು ರಶ್ಯಾದಲ್ಲಿ. This comes from Communism. ಭಾರೀ ಛಳಿ ಇರುತ್ತದೆ. ಅವರ ಮನೆಯಲ್ಲಿ ಒಲೆ ಹಚ್ಚಲು ಕೋಲ್ ಇರುವುದಿಲ್ಲ. ಆ ಮಗು ತನ್ನ ತಾಯಿಗೆ ಕೇಳುತ್ತಾನೆ. ನಮ್ಮ ಮನೆಯಲ್ಲಿ ಕೋಲ್ ಏಕೆ ಇಲ್ಲ ಎಂದು ಕೇಳುತ್ತಾನೆ. ಆಕೆ ಹೇಳುತ್ತಾಳೆ ನಿಮ್ಮ ತಂದೆ ಕೋಲ್ ಮೈನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಕೋಲ್ ಸರ್‌ಪ್ಲಸ್ ಆಗಿದೆ ಎಂದು ಹೇಳಿ ಅವರನ್ನೆಲ್ಲಾ ಕೆಲಸದಿಂದ ತೆಗೆದಿದ್ದಾರೆ. ಅದಕ್ಕೆ ನಮ್ಮ ಮನೆಯಲ್ಲಿ ಕೋಲ್ ಇಲ್ಲ ಎಂದು ಹೇಳಿದಳು. ಆ ಮಗು ಯೋಚನೆ ಮಾಡಿತು, ನಮ್ಮ ದೇಶದಲ್ಲಿ ಕೋಲ್ ಸರ್‌ಪ್ಲಸ್ ಆಗಿದೆ, ನಮ್ಮ ಅಪ್ಪನಿಗೆ ಸಂಬಳ ಸಿಕ್ಕಿಲ್ಲ. ನಮ್ಮ ಮನೆಯಲ್ಲಿ ಒಲೆ ಹಚ್ಚಲು ಕೋಲ್ ಇಲ್ಲ. ಏನು ಇದು? ಇದನ್ನೇ ಮಾರ್ಕೆಟ್ ಎಂದು ಕರೆಯುವುದು.

+ ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಟೊಮೇಟೋದಾರರ ಸಂಕಷ್ಟ ಮತ್ತು ಬೆಳೆ ಕುಸಿತದ ಕಾರಣದ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಹೆಚ್ಚಿನ ಕಾಳಜಿ ವಹಿಸಿ ಮಾತನಾಡಿದ್ದಾರೆ ಹಾಗೂ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸರಿಯಾದಂತಹ ಉತ್ತರವನ್ನು ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ನಮ್ಮ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮಾತ್ರ ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಉತ್ಪಾದನೆ ಹೆಚ್ಚಾಗಿದೆ, ಕಡಿಮೆ ಬೇಡಿಕೆ ಆಗಿದೆ. ಉತ್ಪಾದನೆ ಏಕೆ ಹೆಚ್ಚಾಗಿದೆ ಎಂದರೆ ಇಷ್ಟು ದಿವಸ ನಮ್ಮ ರೈತರು ಹಳೆಯ ಪದ್ಧತಿಯನ್ನು ಉಪಯೋಗಿಸಿ ಬೀಜ ಇಲ್ಲದೇ, ಮಾರಾಟ ಮಾಡತಕ್ಕ ವ್ಯವಸ್ಥೆ ಹೆಚ್ಚಾಗಿಲ್ಲದೇ, ಉತ್ಪನ್ನ ಮಾಡಿದರೂ ಅದು ಮಾರಾಟ ಆಗದೇ ಇರುವ ಪರಿಸ್ಥಿತಿ ಇತ್ತು. ಈಗ ಹೊಸ ಪದ್ಧತಿಯನ್ನು ಅನುಸರಿಸಿ ಐದು ಟನ್ ಬೆಳೆಯುವ ಕಡೆಗೆ 10-12 ಟನ್ ಬೆಳೆಯುವ ಪರಿಸ್ಥಿತಿಗೆ ರೈತ ಬಂದಿದ್ದಾನೆ. ಅವನ ಯೀಲ್ಡ್ ಜಾಸ್ತಿ ಆಗಿದೆ. ಒಂದು ಎಕರೆಯಲ್ಲಿ 5 ಟನ್ ಬೆಳೆ ಬೆಳೆಯುತ್ತಿದ್ದ ರೈತ ಇವತ್ತು 10-12 ಟನ್ ಬೆಳೆಯುತ್ತಿದ್ದಾನೆ. ಜೊತೆಗೆ ಅವಿನಾಶ್ -2 ಎಂದು, ಒಂದು ಒಳ್ಳೆಯ ಬೀಜವನ್ನು ತೆಗೆದು ಕೊಂಡಿದ್ದಾನೆ. ಅದು ಒಳ್ಳೆಯ ಬೀಜ ಆದ್ದರಿಂದ, ಡಿಸೀಸ್ ಫ್ರೀ ಆಗಿರುವುದರಿಂದ, ಒಳ್ಳೆಯ ಶಕ್ತಿ ಇರುವುದರಿಂದ ಇವತ್ತು 10 ಟನ್‌ನಿಂದ 20 ಟನ್ ಬೆಳೆಯುವುದಕ್ಕೆ ಒಂದು ಕಾರಣವಾಗಿದೆ. ಅನೇಕ ರೀತಿಯ ಹೈಬ್ರಿಡ್‌ಗಳು ಬಂದವು ಇಂದು ಉತ್ಪಾದನೆ ಹೆಚ್ಚಿಗೆ ಆಗಿದೆ. ಜೊತೆಗೆ ಹೆಚ್ಚಿಗೆ ರೈತರು ಸಿಕ್ಕಾಪಟ್ಟೆ ಬೆಳೆಯಲು ಕಾರಣ ಎಂದರೆ ಕಳೆದ ವರ್ಷ ಇದೇ ತಿಂಗಳಿನಲ್ಲಿ ಒಂದು ಕೆಜಿ ಟೊಮೇಟೋಗೆ 11 ರಿಂದ 15 ರೂಪಾಯಿಯವರೆಗೆ ಬೆಲೆ ಇತ್ತು. ರೈತನಿಗೆ ಆಸೆ ಆಯಿತು. 11 ರಿಂದ 15 ರೂಪಾಯಿಯವರೆಗೆ ಬೆಲೆ ಇದೆ. ನಾನು ಹೆಚ್ಚಿಗೆ ಬೆಳೆದರೆ ಆರ್ಥಿಕವಾಗಿ ಮುಂದೆ ಬರಬಹುದು ಎನ್ನುವ ಕಾರಣದಿಂದ ಪಾಪ ಹೆಚ್ಚಿಗೆ ರೈತರು ಬೆಳೆದರು. ನಮಗೆ ಕ್ರಾಪಿಂಗ್ ಮೆಥೆಡ್ ಇಲ್ಲ. ಅಥವಾ ಯಾವ ರೀತಿ ಮಾರ್ಕೆಟ್ ಇದೆ ಎಂಬ ಬಗ್ಗೆ ಸರ್ವೆ ಇಲ್ಲ. ಇದೊಂದು ಕಾರಣಕ್ಕಾಗಿ ಹೆಚ್ಚಿಗೆ ಉತ್ಪಾದನೆ ಆಗಿದೆ. ಜೊತೆಗೆ ಮಹಾರಾಷ್ಟ್ರದಲ್ಲಿ ಗಲಾಟೆ ಆದ ಪ್ರಯುಕ್ತ ಅಲ್ಲಿ ಟ್ರಾನ್ಸ್‌ಪೋರ್ಟೇಷನ್‌ಗೆ ಬಹಳ ಧಕ್ಕೆ

ಆದ್ದರಿಂದ ನಮ್ಮಿಂದ ಹೋಗಬೇಕಾದಂತಹ ಟೊಮೇಟೋ ಅಲ್ಲಿಗೆ ಹೋಗಲಿಕ್ಕೆ ಆಗಲಿಲ್ಲ. ಅದೊಂದು ಕಾರಣ. ಜೊತೆಗೆ ಕಲ್ಕತ್ತಾ ಮತ್ತು ಮಹಾರಾಷ್ಟ್ರದಲ್ಲಿ ಏನು ಟೊಮೇಟೋ ಕೊಂಡು ಕೊಳ್ಳುತ್ತಿದ್ದರೋ, ಆ ಟೊಮೇಟೋವನ್ನು ಅವರೇ ಉತ್ಪಾದನೆ ಮಾಡಲಿಕ್ಕೆ ಶುರು ಮಾಡಿದ್ದಾರೆ. ಇದೂ ಒಂದು ಕಾರಣ. ಈ ಎಲ್ಲಾ ಕಾರಣದಿಂದ ಇವತ್ತು ಟೊಮೇಟೋ ದುಸ್ಥಿತಿಗೆ ಬಂದಿದೆ. ಸರ್ಕಾರ ಏನೂ ಮಾಡಿಲ್ಲ ಎಂದು ಹೇಳುತ್ತಾರೆ. ಕಳೆದ ಸಾರಿ ಆಲೂಗಡ್ಡೆ, ಈರುಳ್ಳಿ ಬೆಲೆ ಕುಸಿಯಿತು. ಸುಮಾರು ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಿ ಇವತ್ತು ನೂರಾರು ಸಾವಿರಾರು ರೈತರಿಗೆ 40 ಕೋಟಿಯಿಂದ 50 ಕೋಟಿ ರೂಪಾಯಿವರೆಗೆ ಲಾಭ ಮಾಡಿಕೊಳ್ಳುವುದಕ್ಕೆ ಅವಕಾಶ ಒದಗಿಸಿದೆವು. ಒಂದು ರೂ.80 ಪೈಸೆ ಇದ್ದ ಆಲೂಗಡ್ಡೆಗೆ ನಾವು 3.50 ಮಾರ್ಕೆಟ್ ಇಂಟೀರಿಯಂ ಸ್ಕೀಮ್‌ನಲ್ಲಿ ತೆಗೆದುಕೊಂಡೆವು. ಈ ಕಾರಣದಿಂದಾಗ ರೈತನಿಗೆ ಲಾಭವಾಯಿತು, ನಮ್ಮ ಸಂಸ್ಥೆಗೆ ನಷ್ಟ ಆಯಿತು. ಮಾನ್ಯ ಸದಸ್ಯರು ತಿಳಿದುಕೊಂಡಿರುವ ರೀತಿ ಹಾಪ್‌ಕಾಮ್ಸ್ ಸಂಸ್ಥೆಗೆ, ರೈತರು ಬೆಳೆದ ಎಲ್ಲಾ ಹಣ್ಣು ತರಕಾರಿಗಳನ್ನು ತೆಗೆದುಕೊಳ್ಳತಕ್ಕಂಥ ಶಕ್ತಿ ಇಲ್ಲ. ಅದಕ್ಕೆ ಇರತಕ್ಕದ್ದು ಕೇವಲ ಹತ್ತು ಪರ್ಸೆಂಟ್ ಕೆಪಾಸಿಟಿ ಮಾತ್ರ. ನೂರಕ್ಕೆ ಹತ್ತು ಪರ್ಸೆಂಟ್ ಇಲ್ಲಿ 90 ಪರ್ಸೆಂಟ್ ಖಾಸಗಿಯಲ್ಲಿ ಮಾರಾಟ ಆಗಬೇಕು. ಆದರೆ ನಾವು ಬೆಲೆಯನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯ ಇಲ್ಲ. ಅದಕ್ಕೆ ಉದಾಹರಣೆ ಎಂದರೆ ಮೊನ್ನೆ ವಿಧಾನ ಪರಿಷತ್ತಿನಲ್ಲೂ ಕೂಡ ಈ ವಿಷಯ ಪ್ರಸ್ತಾಪ ಆಗಿ ನಾವು ತತ್‌ಕ್ಷಣ ಎಲ್ಲಾ ಅಧಿಕಾರಿಗಳನ್ನು ಕರೆದು 30 ಪೈಸೆಯಿಂದ 40 ಪೈಸೆಗೆ ಖರೀದಿ ಆಗುತ್ತಿದ್ದಂತಹ ಟೊಮೋಟೋ ಬೆಲೆಯನ್ನು ಕನಿಷ್ಟ 1.20 ರೂಪಾಯಿಗೆ ತೆಗೆದುಕೊಳ್ಳುತ್ತೇವೆಂದು ಅನೌನ್ಸ್ ಮಾಡಿ, ನಾವು ಕೊಂಡುಕೊಂಡೆವು. ನಾವು ಕೊಂಡುಕೊಂಡ ಪ್ರಕಾರ ಈಗಾಗಲೇ ಕೋಲಾರ ಜಿಲ್ಲೆಯಲ್ಲಿ ಕೆಜಿಗೆ ಎರಡು ರೂಪಾಯಿ ಹೆಚ್ಚಿಗೆ ಆಗಿದೆ. ಇದೇ ಸರ್ಕಾರ ಮಾಡಬೇಕಾಗಿರುವ ಕೆಲಸ. ಸರ್ಕಾರ ಎಲ್ಲವನ್ನೂ ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಆದರೆ ಸರ್ಕಾರ ಮಾರ್ಕೆಟ್ ಇಂಟರ್‌ಫಿಯರ್ ಆದ ತಕ್ಷಣದಿಂದಲೇ 40 ಪೈಸೆ ಇದ್ದ ಟೊಮೇಟೋ ಇವತ್ತು ಎರಡು ರೂಪಾಯಿಗೆ ಹೋಗಿದೆ. This is what the Government has to do. ಆ ಕೆಲಸವನ್ನು ಗವರ್ನಮೆಂಟಿನವರು ಮಾಡಿದ್ದೇವೆ. ಅದಕ್ಕೆ ಇನ್ನೂ ಬಹಳ ಸಲಹೆ ಕೊಟ್ಟಿದ್ದೀರಿ.

ಶ್ರೀ ವಿ. ಮುನಿಯಪ್ಪ : ರಸ್ತೆಯಲ್ಲಿ ಟೊಮ್ಯಾಟೋವನ್ನು ಸುರಿದಿದ್ದಾರೆ.

ಉಪಾಧ್ಯಕ್ಷರು : ಮುನಿಯಪ್ಪನವರೇ ನೀವು ಹಾಗೆ ಮಾಡಿದರೆ ಹೇಗೆ?

ಶ್ರೀ ವಿ. ಮುನಿಯಪ್ಪ : ನಿನ್ನೆ ಶನಿವಾರ ಬಹಳ ದಿವಸ ಆಗಿಲ್ಲ. ರಸ್ತೆಯ ಮೇಲೆ ಸುರಿದಿದ್ದಾರೆ. ಎರಡು ರೂಪಾಯಿ ಹೆಚ್ಚಿಗೆ ಆಗಿದೆ ಎಂದು ಸುಳ್ಳು ಮಾಹಿತಿ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : 2.8.97ರಂದು ಅಂದರೆ ಮೊನೆಯ ದಿವಸ ನಾವು 300 ರಿಂದ 350 ಟನ್‌ಅನ್ನು 1.20ಕ್ಕೆ ಖರೀದಿ ಮಾಡಿದ್ದೇವೆ. ಕೆಎಐಡಿ, ಹಾಪ್‌ಕಾಮ್ಸ್ ಮತ್ತು ಮಾರ್ಕೆಟಿಂಗ್ ಇವತ್ತಿನ ದಿವಸದ ಬೆಲೆ ದಯಮಾಡಿ ಕೇಳಿ ನೋಡಿ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ತಾವು ಕಳೆದ ವಾರದ ವಿಷಯ ಹೇಳುತ್ತಿದ್ದೀರಿ, ಅದು ಸರಿಯಾಗಿದೆ. ಆದರೆ ಇವತ್ತು 1.20 ರೂಪಾಯಿ ಹಾಗೆ ಎಷ್ಟು ಇದ್ದರೂ ನಾವು ತೆಗೆದುಕೊಳ್ಳುತ್ತೇವೆ. 1.20 ರೂಪಾಯಿಗೆ ಈಗಾಗಲೇ ತೆಗೆದುಕೊಳ್ಳುತ್ತಿದ್ದೇವೆ, ಈಗಾಗಲೇ ಕೆಎಐಸಿನಲ್ಲಿ 15 ಟನ್ ಇದೆ. 350 ಟನ್ ಅನ್ನು ಮೂರು ದಿವಸದಿಂದ ನಾವು ಖರೀದಿ ಮಾಡಿದ್ದೇವೆ. ಆದ್ದರಿಂದ ಸರ್ಕಾರ ಏನೂ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ. ಸರ್ಕಾರಕ್ಕೆ ಕೂಡ ರೈತರ ಬಗ್ಗೆ ಕಾಳಜಿ ಇದೆ. ಅವರ ಸಂಕಷ್ಟಕ್ಕೆ ನಾವು ಕೂಡ ನೆರವಾಗಬೇಕು ಎನ್ನುವ ದೃಷ್ಟಿಯಿಂದ ಈ ಕ್ರಮವನ್ನು ತೆಗೆದುಕೊಂಡಿದ್ದೇವೆ. ಆದರೆ ಪರಿಹಾರ ಕೊಡಬೇಕು ಎಂದು ಹೇಳುತ್ತಿದ್ದಾರೆ. ಸರ್ಕಾರ ಅದನ್ನು ಪರಿಶೀಲಿಸಿ ಪರಿಹಾರ ಕೊಡುವುದಕ್ಕೆ ಸಾಧ್ಯವಾ ಎಂದು ನೋಡುತ್ತದೆ. ಜೊತೆಗೆ ಎಲ್ಲರೂ ತಿಳಿದುಕೊಂಡಿರುವ ಹಾಗೆ ನಮ್ಮ ರೈತ ಅವತ್ತು ಮಾರಿ, ಅವತ್ತು ಬೆಳೆದು ಜೀವನ ನಡೆಸತಕ್ಕವನು. ನೀವೆಲ್ಲ ತಿಳಿದುಕೊಂಡಿರುವ ಹಾಗೆ ಹರ್ಯಾಣಾದಲ್ಲಿ 100 ಕೋಲ್ಡ್ ಸ್ಟೋರೇಜ್ ಇದೆ, ಕರ್ನಾಟಕದಲ್ಲಿ ನೂರು ಕೋಲ್ಡ್ ಸ್ಟೋರೇಜ್ ಇಲ್ಲ ಎಂದು ವ್ಯಥೆ ಪಡಬೇಕಾಗಿಲ್ಲ. ಇರತಕ್ಕ 13 ಕೋಲ್ಡ್ ಸ್ಟೋರೇಜ್‌ನಲ್ಲಿಯೇ ಉಪಯೋಗಿಸಿಕೊಳ್ಳತಕ್ಕಂಥ ಪ್ರವೃತ್ತಿ ನಮ್ಮ ರೈತರಲ್ಲಿಲ್ಲ. ಮಾಡಬಾರದು ಎಂದಲ್ಲ. ಮಾಡಬೇಕು ಎನ್ನುವ ಉದ್ದೇಶದಿಂದ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್ ಎಂದು ಮಾಡುತ್ತಿದ್ದೇವೆ. ಎನ್‌ಸಿಡಿಸಿಯಿಂ ಸುಮಾರು 66 ಕೋಟಿ ರೂಪಾಯಿ ನಮಗೆ ಈಗಾಗಲೇ ಮಂಜೂರು ಆಗಿದೆ. ಎಲ್ಲೆಲ್ಲಿ ತರಕಾರಿಗಳು ಹಣ್ಣುಗಳು ಹೆಚ್ಚು ಹೆಚ್ಚು ಬೆಳೆಯುತ್ತದಯೇ ಎಲ್ಲೆಲ್ಲಿ ಕೋಲ್ಡ್ ಸ್ಟೋರೇಜಿನ ಅವಶ್ಯಕತೆ ಇದೆಯೋ, ಎಲ್ಲಾ ಕಡೆ ಮಾಡುವುದಕ್ಕೆ ನಾವು ಈಗಾಗಲೇ ಕಾರ್ಯೋನ್ಮುಖರಾದಿದ್ದೇವೆ. ಅದನ್ನು ಇಷ್ಟರಲ್ಲಿಯೇ ಅನುಷ್ಠಾನಕ್ಕೆ ತರುತ್ತೇವೆ ಎನ್ನತಕ್ಕ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಉತ್ತಮವಾದಂತಹ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಏನಪ್ಪ ಅಂದರೆ ಆಹಾರ ಪರಿಷ್ಕರಣೆ, ಸಂಸ್ಕರಣೆ ಮಾಡತಕ್ಕದ್ದು. ಸಂಸ್ಕರಣೆ ಎಂದರೆ ಫುಡ್ ಪ್ರೋಸೆಸಿಂಗ್ ಯೂನಿಟ್. ಈಗ ಟೊಮೇಟೋ ಬೆಲೆ. ಈ ರೀತಿ ರೈತರು ಬೆಳೆದಂತಹ ಒಂದಲ್ಲ ಒಂದು ಹಣ್ಣಾಗಲೀ ಅಥವಾ ತರಕಾರಿ ಆಗಲೀ ಕುಸಿತಕ್ಕೆ ಕಾರಣವಾಗುತ್ತದೆ. ಹೋದ ಸಾರಿ ಆಲೂಗೆಡ್ಡೆ ಈರುಳ್ಳಿ ಆಯಿತು. ಈ ಸಾರಿ ಟೊಮೇಟೋ ಆಯಿತು. ಮುಂದಿನ ಸಾರಿ ಬೇರೆ ಯಾವುದೋ ತರಕಾರಿಗೆ ಬರುತ್ತದೆ. ಅದರಿಂದ ಅದಕ್ಕೇ ಒಂದು ಯೂನಿಟ್ ಮಾಡಬೇಕು. ಈಗಾಗಲೇ ಮಾನ್ಯ ಕೃಷಿ ಸಚಿವರು ಆ ವಿಷಯದ ಬಗ್ಗೆ ಕಾರ್ಯೋನ್ಮುಖರಾಗಿದ್ದಾರೆ. "factory on wheels" ಎನ್ನತಕ್ಕ ಫ್ಯಾಕ್ಟರಿ ಮಾಡಿ ಈಗಾಗಲೇ ಸುಮಾರು 15 ಟನ್ ಪ್ರತಿದಿವಸ ತೆಗೆದುಕೊಂಡು ಇವತ್ತು ಅಲ್ಲಿ ಪ್ರೋಸೆಸಿಂಗ್ ಮಾಡುತ್ತಿದ್ದೇವೆ. ಅದರಲ್ಲಿ ಟೊಮೇಟೋ ಕಿಚಪ್ ಮಾಡಬಹುದು, ಜ್ಯೂಸ್ ಮಾಡಬಹುದು, ಇದೆಲ್ಲವನ್ನು ಮಾಡಬಹುದು. ನಮಗೆ ಅಂದರೆ ಸರ್ಕಾರ ಮಾಡುವುದಕ್ಕೆ ಏನೂ ತೊಂದರೆ ಇಲ್ಲ, ಸರ್ಕಾರ ಮಾಡಬಹುದು. ಸರ್ಕಾರ ಮಾಡಿದಂತಹ ಎಲ್ಲ ಸಂಸ್ಥೆಗಳು ಲಾಭದಾಯಕವಾಗಿ ನಡೆಯದ ಹಾಗೆ ಕಾಣುವುದರಿಂದ ನಮಗೂ ಸ್ವಲ್ಪ ಹೆದರಿಕೆ ಇದೆ. ಆದ್ದರಿಂದ ಖಾಸಗಿಯವರಿಗೆ ನಾವು ಹೆಚ್ಚು ಪ್ರೋತ್ಸಾಹ ಕೊಟ್ಟು ಸಬ್ಸಿಡಿ ಮುಖಾಂತರ ಫುಡ್ ಪ್ರೋಸೆಸಿಂಗ್ ಯೂನಿಟ್ ಮಾಡುವುದರ ಮುಖಾಂತರ ಈ

ತರಹ ಬೆಲೆಗಳಿಗೆ ಕುಸಿತಕ್ಕೆ ಕಾರಣಗಳನ್ನು ತಡೆ ಹಿಡಿಯದ ಹೊರತು ಬರೇ ಮಾತನಾಡುವುದರಿಂದ ಏನೂ ಆಗುವುದಿಲ್ಲ. ನಾವು ಕಾರ್ಯೋನ್ಮುಖರಾಗುತ್ತೇವೆ. ನೀವೆಲ್ಲ ಸಹಕಾರ ನೀಡಿದರೆ, ಆ ಕೆಎಚ್‌ಎಫ್ ಮುಖಾಂತರ ಇಂತಹ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

+ ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ದಿವಸ ನಾನು ಸಂತೋಷಪಡುತ್ತೇನೆ. ಕಾರಣವೇನೆಂದರೆ ರೈತರ ವಿಚಾರದಲ್ಲಿ ಇಷ್ಟೊಂದು ಜನ ಮಾನ್ಯ ಸದಸ್ಯರು ಬಹಳ ಕಾತುರತೆಯಿಂದ ಮಾತನಾಡಿದ್ದಾರೆ. ರೈತರ ಕಷ್ಟ ಸುಖವನ್ನು ಪ್ರತಿಬಿಂಬಿಸತಕ್ಕಂಥ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. ಇದಕ್ಕೆ ತಕ್ಕಂತೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಸರಿಯಾದಂತಹ ಸ್ಪಂದನೆಯನ್ನು ನೀಡಿದ್ದಾರೆ. ಇವತ್ತಿನ ಚರ್ಚೆ ಬಗ್ಗೆ ನನಗಂತೂ ಕೂಡ ಬಹಳ ಸಂತೋಷವಾಯಿತು. ಒಬ್ಬ ರೈತನಾಗಿ ನಾನು ಆ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಟೊಮೇಟೋಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ರಿಲೀಫ್ ಬಗ್ಗೆ ಹೇಳಲಿಲ್ಲ. ಇದನ್ನು ಮಾಡುತ್ತೇನೆ, ಅದನ್ನು ಮಾಡುತ್ತೇನೆಂದು ಹೇಳಿದರು. ಅವರು ಸಲಹೆ ಕೇಳಿದರು ಅಷ್ಟೇ. ನೀವೇನಾದರೂ ರಿಲೀಫ್ ಕೊಡುವುದು ಇದ್ದರೆ ಹೇಳಿ.

ಶ್ರೀ ವಿ. ಮುನಿಯಪ್ಪ : ಇರುವ ವಿಚಾರ ನಿಮಗೆ ಗೊತ್ತಿದೆ. ನಿಮಗೆ ಗೊತ್ತಿದ್ದು ನೀವು ವಿಧಾನ ಸೌಧದ ಮುಂದೆ ತಂದು ಟೊಮೇಟೋ ಸುರಿದಿರಲ್ಲ. ಬೆಳೆಗಾರರ ಕಷ್ಟ ಗೊತ್ತಿದ್ದರೂ ನೀವು ಏಕೆ ಹಾಗೆ ಮಾಡಿದಿರಿ? ಎಕ್ಸ್‌ಪ್ಲಾಯ್ಟ್ ಮಾಡುವುದಕ್ಕೆ ಮಾಡಿದಿರಾ ಅಥವಾ ನೈಜವಾಗಿ ಮಾಡಿದ್ದೀರಾ ಎಂಬ ಬಗ್ಗೆ ಸರಿಯಾದ ಉತ್ತರ ಬರಬೇಕು.

ಶ್ರೀ ಸಿ. ಬೈರೇಗೌಡ : ನೀವು ಮಾತನಾಡುವಾಗ ಮುಚ್ಚಿಕೊಂಡು ಕುಳಿತಿದ್ದೆ. ನೀವು ದಯವಿಟ್ಟು ಅದನ್ನು ಪಾಲನೆ ಮಾಡಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಬಾಯಿ ಮುಚ್ಚಿಕೊಂಡು ಕುಳಿತಿದ್ದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಪ್ರಪಂಚದಲ್ಲಿ ಏನು ಪರಿಸ್ಥಿತಿ ಇದೆ, ನಮ್ಮ ದೇಶದಲ್ಲಿ ಏನು ಪರಿಸ್ಥಿತಿ ಏನು ಇದೆ ಎನ್ನುವುದನ್ನು ಸಹ ಹೇಳಿದ್ದಾರೆ. ಆದರೆ, ಅಭಿವೃದ್ಧಿ ಹೊಂದಿದಂತಹ ದೇಶದಲ್ಲಿನ ಸೂಕ್ಷ್ಮವಾದ ಕೆಲವು ಅಂಕಿ ಅಂಶಗಳನ್ನು ನಾನು ಮಾನ್ಯ ಸದಸ್ಯರ ಹಾಗೂ ಸದನದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಪ್ರಪಂಚದಲ್ಲಿ ಇವತ್ತಿನ ದಿವಸ ಈ ತೋಟಗಾರಿಕೆ ಬೆಳೆಗಳನ್ನು ಮುಂದುವರಿದಂತಹ ದೇಶದಲ್ಲಿ ಶೇಕಡಾ 80 ರಿಂದ 85 ಪರ್ಸೆಂಟ್ ಸಂಸ್ಕರಣೆಗೆ ಒಳಪಡುತ್ತಿದೆ. ಇದನ್ನು ದಯವಿಟ್ಟು ಮಾನ್ಯ ಸದಸ್ಯರುಗಳು ಅರ್ಥ ಮಾಡಿಕೊಳ್ಳಬೇಕು. 80 ರಿಂದ 85ರಷ್ಟು ತೋಟಗಾರಿಕಾ ಬೆಳೆಗಳು. ಮೆಕ್ಸಿಕೋದಲ್ಲಿ 85 ಪರ್ಸೆಂಟ್ ಮಲೇಶಿಯಾದಲ್ಲಿ ಶೇಕಡಾ 80 ಪರ್ಸೆಂಟ್. ಅಮೇರಿಕಾದಲ್ಲಿ

ಶೇಕಡಾ 80 ಪರ್ಸೆಂಟ್. ಇಷ್ಟು ಹಾರ್ಟಿಕಲ್ಚರಲ್ ಪ್ರಾಡಕ್ಟ್ಸ್ ಸಂಸ್ಕರಣೆಗೆ ಒಳಪಡುತ್ತಿದೆ. ನಮ್ಮ ದೇಶದಲ್ಲಿ ಏನಾಗುತ್ತಿದೆ? ಅಂದರೆ ಕೇವಲ ಶೇಕಡಾ 1.5 ರಷ್ಟು ಮಾತ್ರ ಸಂಸ್ಕರಣೆಗೆ ಒಳಪಡುತ್ತಿದೆ. ಮಿಕ್ಕಂತೆ ನಮ್ಮಲ್ಲಿ ಎಷ್ಟು ಬೆಳೆಯತಕ್ಕದ್ದು ಇದೆ, ನಮ್ಮಲ್ಲಿ ಎಲ್ಲವನ್ನೂ ಸಹ ಲೇಬಲ್ ಎಂದರೆ ಯಾವ ರೀತಿಯಾಗಿ ಬೆಳೆದವೋ ಅದನ್ನು ನಾವು ಫ್ರೆಶ್ ಆಗಿ ಬಳಕೆ ಮಾಡುತ್ತಿದ್ದೇವೆ. ಇದರಿಂದ ಒಂದು ಸಾರಿ ಒಂದು ಉತ್ಪನ್ನವನ್ನು ಸಂಸ್ಕರಣೆಗೊಳಿಸಿದರೆ, ಅದರ ಶೆಲ್ಫ್ ಲೈಫ್ ಜಾಸ್ತಿ ಆಗುತ್ತದೆ. ಉದಾಹರಣೆ ಟೊಮೇಟೋವನ್ನು ಸಂಸ್ಕರಣಗೊಳಿಸಲು ಕೋಲ್ಡ್ ಸ್ಟೋರೇಜಿನಲ್ಲಿಟ್ಟರೆ ಐದು ದಿವಸ, ಆರು ದಿವಸ ಅಥವಾ ಒಂದು ವಾರ ಇಡಬಹುದು. ಅದಕ್ಕಿಂತ ಹೆಚ್ಚಿಗೆ ಇಡುವುದಕ್ಕೆ ಆಗುವುದಿಲ್ಲ. ಅದನ್ನೇ ಸಂಸ್ಕರಣೆ ಮಾಡಿ ಮೊಮೇಟೋ ಕೆಚಪ್ ಸಾಸ್‌ಗಳನ್ನು ಮಾಡಿದರೆ ಅದರ ಸೆಲ್ಫ್‌ಲೈಫೂ ಜಾಸ್ತಿಯಾಗುತ್ತದೆ. ದುರಾದೃಷ್ಟವಶಾತ್ ಸಂಸ್ಕರಣೆ ಇಂಡಸ್ಟ್ರಿ ನಮ್ಮ ದೇಶದಲ್ಲಿ ಡೆವಲಪ್ ಆಗದಿರುವುದು ಇವತ್ತಿನ ಸ್ಥಿತಿಗೆ ಕಾರಣ. ನಾನೂ ಒಬ್ಬ ಬೆಳೆಗಾರನಾಗಿ ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಅದಕ್ಕಾಗಿ ನಾವು ಏನು ಮಾಡಿದ್ದೇವೆ ಎಂಬುದನ್ನು ಹೇಳಲು ಇಷ್ಟಪಡುತ್ತೇನೆ. ನನ್ನ ಸ್ನೇಹಿತ ಜಯಕುಮಾರ್ ಹೇಳಿದಂತೆ ಪ್ರಪಂಚದಲ್ಲೇ ಒಂದು ಹೊಸದನ್ನು ಮಾಡಿ ತೋರಿಸಿದ್ದೇವೆ. ಇವತ್ತು ಟೊಮೇಟೋ ಬೆಲೆ ಬಿದ್ದುಹೋಗಿದೆ, ನಾಳೆ ಆಲೂಗಡ್ಡೆ ಬಿದ್ದು ಹೋಗುತ್ತದೆ ಆದ್ದರಿಂದ ಅದನ್ನು ಸ್ಥಳದಲ್ಲೇ ಸಂಸ್ಕರಣೆ ಗೊಳಿಸಬೇಕೆಂಬ ಉದ್ದೇಶದಿಂದ "ಫ್ರೂಟ್ ಪೋಸೆಸಿಂಗ್ ಫ್ಯಾಕ್ಟರಿ ಆನ್ ವೀಲ್" ಎಂದು ಮಾಡಿದ್ದೇವೆ. ಅದರ ಒಂದು ಪ್ರೊಟೊಟೈಪ್ ತಯಾರಾಗಿದೆ. ಇದನ್ನು ಇನ್ನೂ ಇಂಪ್ರೂವ್ ಮಾಡಿ ಬೇರೆ ಕಡೆಗೆಲ್ಲ ಕಳಿಸಬೇಕೆಂಬ ಘಟ್ಟದಲ್ಲಿದ್ದೇವೆ ಇದನ್ನೊಂದು ಲಾಂಗ್‌ಟೈಂ ಪ್ರೋಗ್ರಾಂ ಆಗಿ ಮಾಡಿದ್ದೇವೆ. ಮಗದೊಂದು ವಿಷಯ, ಕೋಲ್ಡ್‌ಸ್ಟೋರೇಜ್‌ಗಳದು. ಟೊಮೇಟೊ ಅನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಡಲು ಆಗುವುದಿಲ್ಲ, ಆಲೂಗಡ್ಡೆ ಇಡಬಹುದು. ಕೆಲವರು ಹೇಳುತ್ತಾರೆ ಈರುಳ್ಳಿ ಇಡಬಹುದು ಅಂತ ಈರುಳ್ಳಿಯನ್ನು ಇಟ್ಟರೆ ಅರ್ಧ ಗಂಟೆಯಲ್ಲಿ ಕೊಳೆತು ಹೋಗುತ್ತದೆ ಆದಷ್ಟೂ ಒಣಹವೆಯಲ್ಲಿ ಶೇಖರಣೆ ಮಾಡಬೇಕಾಗುತ್ತದೆ. ಈ ರೀತಿ ಒಂದೊಂದು ಉತ್ಪನ್ನಕ್ಕೂ ಒಂದೊಂದು ರೀತಿಯ ಸ್ಟೋರೇಜ್ ಮಾಡಬೇಕಾದ ಅವಶ್ಯಕತೆ ಇದೆ. ದುರಾದೃಷ್ಟವಶಾತ್ ಯಾವ ಪ್ರಮಾಣದಲ್ಲಿ ಅದರ ಅವಶ್ಯಕತೆ ಇದೆಯೋ ಅಷ್ಟು ಅಭಿವೃದ್ಧಿಪಡಿಸಲು ಇನ್ನೂ ಆಗಿಲ್ಲ. ಕೆಲವು ಕಡೆ ಕೋಲ್ಡ್ ಸ್ಟೋರೇಜ್ ಬಂದಿವೆ, ಆದರೂ ಅಲ್ಲಿನ ರೈತರು ಉಪಯೋಗಿಸಿಕೊಳ್ಳುತ್ತಿಲ್ಲ. ಉದಾಹರಣೆಗೆ ಬಂಗಾರಪೇಟೆಯಲ್ಲಿ ಒಂದು ಕೋಲ್ಡ್ ಸ್ಟೋರೇಜಿದೆ, 500 ರಿಂದ 600 ಟನ್ ಕೆಪಾಸಿಟಿಯ ಅದು ಖಾಸಗಿರಂಗದಲ್ಲಿ ಬಂದಿದೆ. ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ, ಕೋಲ್ಡ್ ಸ್ಟೋರೇಜ್‌ನವನು ಅಳುತ್ತಿದ್ದಾನೆ, ನಾನು ಇಷ್ಟು ದೊಡ್ಡದನ್ನು ಕಟ್ಟಿದರೂ ಯಾರೂ ಉಪಯೋಗಿಸಿಕೊಳ್ಳುತ್ತಿಲ್ಲ, ಬಾಡಿಗೆ ಕಟ್ಟುವುದಕ್ಕೆ ಆಗುತ್ತಿಲ್ಲ, ನಾನು ಏನು ಮಾಡುವುದು ಅಂತ? ಅಂತಹ ಪರಿಸ್ಥಿತಿಯೂ ನಮ್ಮ ರಾಜ್ಯದಲ್ಲಿದೆ. ನಾನು, ಮುಖ್ಯಮಂತ್ರಿಗಳು ಮತ್ತು ಅರ್ಥಸಚಿವರ ಜೊತೆ ಈ ಬಗ್ಗೆ ತೀವ್ರ ಚರ್ಚೆ ಮಾಡಬೇಕೆಂದು ಇದ್ದೇನೆ. ಈ ರೀತಿಯ ಇನ್‌ಫ್ರಾಸ್ಟ್ರಕ್ಚರ್ ಕೋಲ್ಡ್ ಸ್ಟೋರೇಜ್ ಇರಬಹುದು, ಪ್ರಾಸೆಸಿಂಗ್ ಯೂನಿಟ್ ಇರಬಹುದು, ಇದನ್ನು ಅಭಿವೃದ್ಧಿಪಡಿಸಬೇಕಾದ್ದು ಅತಿ ಅವಶ್ಯಕ. ಮಾನ್ಯ ಬೆಲ್ಲದ್ ಅವರು ಇದಕ್ಕೆ ಏನಾದರೂ ಸಬ್ಸಿಡಿ ಕೊಡಲು ಮುಂದಾಗಬೇಕು ಅಂತ ಒಂದು ಮಾತು

ಹೇಳಿದರು. ಅವರ ಸಲಹೆಯನ್ನು ವೈಯಕ್ತಿಕವಾಗಿ ನಾನಂತೂ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೊಡನೆ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸಂಸ್ಕರಿಸುವ ಘಟಕಗಳನ್ನು ಸರ್ಕಾರದ ಸಬ್ಸಿಡಿ ಮುಂತಾದ ಉತ್ತೇಜನ ಕೊಟ್ಟು ಉಳಿಸಿಕೊಳ್ಳದೇ ಇದ್ದರೆ, ಪ್ರತಿ ದಿವಸವೂ ಕೃಷಿ ಉತ್ಪಾದಿತ ವಸ್ತುಗಳ ಬೆಲೆ ಬಿದ್ದುಹೋಗುತ್ತಿರುತ್ತದೆ, ಹೋದವರ್ಷ ಆಲೂಗೆಡ್ಡೆ ಆಯಿತು ಈರುಳ್ಳಿ ಆಯಿತು, ಈಗ ಟೊಮೇಟೋ ಆಯಿತು ಪುನಃ ಹಾಸನದಲ್ಲಿ ಆಲೂಗಡ್ಡೆ ಬರುತ್ತಿದೆ. ಈ ವರ್ಷ ಹಾಸನದಲ್ಲಿ ಶೇಕಡ ಐದರಷ್ಟು ಹೆಚ್ಚು ಆಲೂಗಡ್ಡೆ ಬೆಳೆಯುವುದು ಜಾಸ್ತಿ ಆಗಿದೆ. ಈಗಾಗಲೇ ಅದರ ಕಡೆ ನಾವು ಗಮನಹರಿಸಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದಕ್ಕೆ ಪರಿಹಾರ ಏನು ಕೊಡುತ್ತೀರಿ ಅದನ್ನು ಹೇಳಿ.

(ಗದ್ದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾನೊಂದು ಪ್ರಶ್ನೆ ಕೇಳಿದೆ. ರಾಜಾಸ್ತಾನ್ ಗುಜರಾತ್ ಮಹಾರಾಷ್ಟ್ರ ತಮಿಳುನಾಡು ಆಂಧ್ರಪ್ರದೇಶ ಯಾವುದಾದರೂ ರಾಜ್ಯಗಳಿಂದ ಮಾರ್ಕೆಟಿಂಗ್ ವ್ಯವಸ್ಥೆ ಬಗ್ಗೆ ಆದೇಶಗಳನ್ನು ತರಿಸಿಕೊಂಡಿದ್ದರೆ, ಅದನ್ನು ಸ್ಟಡಿ ಮಾಡಿದ್ದರೆ ಸದನಕ್ಕೆ ಸ್ವಲ್ಪ ಮಾಹಿತಿ ಕೊಡಿ.

ಶ್ರೀ ಸಿ. ಬೈರೇಗೌಡ : ಮಾರುಕಟ್ಟೆಗೆ ಬಂದ ವಸ್ತುಗಳನ್ನೆಲ್ಲ ಇಂಥವರು ಖಡಾಖಂಡಿತವಾಗಿ ಕೊಂಡುಕೊಳ್ಳಲೇಬೇಕೆಂಬ ಕಾನೂನು ನನಗೆ ಗೊತ್ತಿರುವಂತೆ ಯಾವುದೇ ರಾಜ್ಯದಲ್ಲೂ ಇಲ್ಲ. ಟೊಮೇಟೊ ಆಲೂಗಡ್ಡೆ ಬಂದುಬಿಟ್ಟಿದೆ ಅದನ್ನು ಕೊಂಡುಕೊಳ್ಳಿ ಅಂತ ಯಾರನ್ನು ಹೇಗೆ ಬಲವಂತ ಮಾಡುವುದು ಅಧ್ಯಕ್ಷರೇ? ಅದ್ಯಾವ ದೇಶದ ಕಾನೂನಿನಲ್ಲಿದೆಯೋ ನನಗಂತೂ ಗೊತ್ತಿಲ್ಲ. ನನ್ನ ಪ್ರಕಾರ ಅದನ್ನು ಮಾಡಲೂ ಸಾಧ್ಯವಿಲ್ಲ. ಇನ್ನು ಕೆಲವು ಸದಸ್ಯರು ಕ್ರಾಪಿಂಗ್ ಪ್ಯಾಟ್ರನ್ ಬಗ್ಗೆ ಹೇಳಿದರು. ನಮ್ಮ ರಾಜ್ಯದ ಕೆಲವು ಅಚ್ಚುಕಟ್ ಪ್ರದೇಶಗಳಲ್ಲಿ ಸೆಮಿಡ್ರೈಗೆ ನಾವು ನೀರು ಕೊಡುತ್ತಿದ್ದೇವೆ. ಹೇಮಾವತಿ ಪ್ರಾಜೆಕ್ಟ್ ಡಿಸೈನ್ ಮಾಡಿದ್ದೇ ಸೆಮಿಡ್ರೈಗೆ ಆದರೆ ಅಲ್ಲಿ ಇವತ್ತು ಕಬ್ಬು ಬತ್ತ ಬೆಳೆಯುತ್ತಿಲ್ಲವೆ? ಈಗಿರುವ ಕಾನೂನಿನಲ್ಲಿ ರೈತನಿಗೆ ನೀನು ಇಂತಹ ಕ್ರಾಪ್ ಬೆಳೆಯಬೇಕು ಅಂತ ಎನ್‌ಫೋರ್ಸ್ ಮಾಡಲು ಕಷ್ಟವಾಗುತ್ತದೆ. ಒಂದು ಕಮಾಂಡ್ ಏರಿಯಾದಲ್ಲೂ ಅದು ಜಾರಿಯಲ್ಲಿಲ್ಲ ಆದರೆ ಪುಸ್ತಕದಲ್ಲಿದೆ ಅಷ್ಟೇ. ಇವು ರೈತನ ನಾನಾ ಸಮಸ್ಯೆಗಳು. ಇವನ್ನು ಸುಲಭವಾಗಿ ಬಗೆಹರಿಸಲು ಆಗುತ್ತಿಲ್ಲ.

ಶ್ರೀ ಹೆಚ್ ಶಿವಪ್ಪ (ಹರಿಹರ) : ಯಾವುದೇ ವಸ್ತುವಿಗೂ ಈ ಪರಿಸ್ಥಿತಿ ಬಂದೇಬರುತ್ತದೆ. ಒಂದು ವರ್ಷ ಈರುಳ್ಳಿಗೆ ಬಂದರೆ ಇನ್ನೊಂದು ವರ್ಷ ಕಬ್ಬು ಟೊಮೇಟೊಗೆ ಬರುತ್ತದೆ. ಮಗದೊಂದು ವರ್ಷ ಮೆಣಸಿನಕಾಯಿಗೆ ಬರುತ್ತದೆ. ಮುಖ್ಯಮಂತ್ರಿಗಳು ಹೇಳಿದಂತೆ ಕೋಳಿಮೊಟ್ಟೆಗೆ ಬರುತ್ತದೆ. ಆದ್ದರಿಂದ ಪ್ರಾಗ್ಮಾಟಿಕ್ ಅಪ್ರೋಚ್ ಇರಬೇಕು.

(ಗದ್ದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ[illegible]ಮಂತ್ರಿಗಳು ಅನೇಕ ವಿಚಾರ ಪ್ರಸ್ತಾಪ ಮಾಡಿದರು. ಅವರು ಹೂವಿನ ವಿಚಾರ ಪ್ರಸ್ತಾಪಿಸಿದರು, ಕಬ್ಬಿನ ವಿಚಾರ ಪ್ರಸ್ತಾಪಿಸಿದರು, ಅದೆಲ್ಲ ಬಿಟ್ಟು ಶಿವಪ್ಪನವರು ಬರೀ ಮೆಣಸಿನಕಾಯಿ ವಿಚಾರ ತೆಗೆದುಕೊಂಡಿರಲ್ಲ, ಏಕೆ ಅಂತ?

ಶ್ರೀ ಸಿ. ಬೈರೇಗೌಡ : ಇವತ್ತು ಏನು ಕ್ರಮ ಕೈಗೊಂಡು ಎಷ್ಟೆಷ್ಟು ಕೊಂಡುಕೊಳ್ಳುತ್ತಿದ್ದೇವೆ ಅಂತ ಮಾನ್ಯ ಸಚಿವರು ಹೇಳಿದ್ದಾರೆ. ಇದನ್ನು ಸ್ವಲ್ಪ ಹೆಚ್ಚಿಗೆ ಕೊಂಡುಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಈಗಾಗಲೇ ಟೊಮೇಟೋ ಬೆಲೆ ಕೆಜಿಗೆ ಎರಡು ರೂಗೆ ಹೋಗಿದೆ. ಈ ಕಾರಣದಿಂದ ಇನ್ನೂ ಹೆಚ್ಚುಹೆಚ್ಚು ಕೊಂಡುಕೊಳ್ಳಲು ಅವರಿಗೆ ತಿಳಿಸುತ್ತೇವೆ. ಹೆಚ್ಚು ಹೆಚ್ಚು ಕೊಂಡುಕೊಳ್ಳುವುದರಿಂದ ರೈತರಿಗೆ ಪ್ರಯೋಜನವಾಗಬಹುದು. ಮತ್ತೆ ಕೆಲವು ಸದಸ್ಯರು ಏನು ಕೊಡ್ತೀರಿ ಅಂತ ಕೇಳಿದರು. ನಾವು ಕೈಹಾಕಿದ್ದರಿಂದಾನೆ 2 ರೂ.ಗೆ ಹೋಗಿರುವುದು ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಏನೂ ವಿಷಯ ಪ್ರಸ್ತಾಪ ಮಾಡಿದೆ, ಅದು ವಿಷಯಾಂತರವಾಗಿದೆ. ನಾನು ಸರ್ಕಾರಕ್ಕೆ ಮೂರು ಮುಖ್ಯವಾದಂತಹ ವಿಚಾರಗಳನ್ನು ಹೇಳಿದೆ. ಮೊದಲನೆಯದಾಗಿ, ಎರಡೂವರೆ ರೂಪಾಯಿಗೆ ಟೊಮೊಟೋನಾ ಹಾಪ್ ಕಾಮ್ಸ್ ಅವರು ಅಲ್ಲಿಯ ಮಾರ್ಕೆಟಿನಲ್ಲಿ ತೆಗೆದುಕೊಳ್ಳಬೇಕು. ಅವರು ನೀವು ಕೊಡತಕ್ಕಂತಹ ಒಂದು ರೂಪಾಯಿ ಇಪ್ಪತ್ತೈದು ಪೈಸೆಗೆ ಇಲ್ಲಿಗೆ ತಂದು ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಸರ್ಕಾರ, ಅಂದರೆ ಹಾಪ್‌ಕಾಮ್ಸ್‌ನವರೇ ಅಲ್ಲಿಗೆ ಹೋಗಿ ತೆಗೆದುಕೊಂಡು ಬರಬೇಕೆಂದು ಒಂದನೇ ಡಿಮ್ಯಾಂಡ್‌ನಲ್ಲಿ ಹೇಳಿದ್ದೆ. ಎರಡನೆಯದಾಗಿ, ನಾನು ಹೇಳುವುದೇನೆಂದರೆ ನಷ್ಟಕ್ಕೆ ಯಾವಾಗಲೂ ಪರಿಹಾರ ಕೊಡಿ ಎಂದು ಹೇಳಿದರೆ ಸರ್ಕಾರ ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ, ಕಷ್ಟದ ಪರಿಸ್ಥಿತಿಯಲ್ಲಿ ಏನಾದರೂ ಪರಿಹಾರ ಕೊಡಿ ಎಂದು ಕೇಳುತ್ತಾ ಇದ್ದೇವೆ. ಮತ್ತು ಎರಡೂ ಕಡೆಯಿಂದ ಕಮಿಷನ್ ಹೋಗುವುದನ್ನು ತಡೆಹಿಡಿಯಬೇಕೆಂದು ಹೇಳುತ್ತಾ ಇದ್ದೇನೆ. ಆದುದರಿಂದ ಸರ್ಕಾರ ಇದಕ್ಕೆ ಏನಾದರೂ ಮಾಡುವುದಕ್ಕೆ ಸಾಧ್ಯ ಇದೆಯೇ? ಎಂದು ಕೇಳುತ್ತಾ ಇದ್ದೇನೆ.

ಶ್ರೀ ಡಿ.ಟಿ. ಜಯಕುಮಾರ್ : ಕೋಲಾರದಲ್ಲಿ ನಮ್ಮ ಹಾಪ್‌ಕಾಮ್ಸ್ ಸಂಸ್ಥೆ ಇದೆ. ಅಲ್ಲಿ ಒಂದು ರೂಪಾಯಿ ಇಪ್ಪತ್ತೈದು ಪೈಸೆಗೆ ತೆಗೆದುಕೊಳ್ಳುತ್ತಾ ಇದ್ದೇವೆ. ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರು ಮಾರುಕಟ್ಟೆ ಪ್ರವೇಶದ ಬಗ್ಗೆ ಹೇಳುತ್ತಾ ಇದ್ದಾರೆ. ಬಹುಶಃ ಅದು ಮಾರುಕಟ್ಟೆ ಸಚಿವರಿಗೆ ಬರುತ್ತದೆ. ಅವರಿಗೆ ಹೇಳಿ, ಅದನ್ನು ಪರಿಶೀಲಿಸಿ ಸರಿಯಾದಂತಹ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾರುಕಟ್ಟೆ ಅಧಿಕಾರಿಗಳು ಯಾರು ಇದ್ದಾರೆ, ಅವರು ರೈತರಿಂದ ಶೇಕಡ 8ರಷ್ಟು 10ರಷ್ಟು ಬಡ್ಡಿಯನ್ನು ರೈತರಿಂದ ಏನು ವಸೂಲಿ ಮಾಡುತ್ತಿದ್ದಾರೆ. ಅದು ಕಾನೂನಿಗೆ ವಿರುದ್ಧವಾಗಿದ್ದರೆ, ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ. ಮತ್ತು ಇದರ ಜೊತೆಗೆ ಮತ್ತೊಂದು ವಿಚಾರವನ್ನು ಸಭೆಯ ಗಮನಕ್ಕೆ ತರುತ್ತೇನೆ. ಅದೇನೆಂದರೆ, ಮಾನ್ಯ ಮಂತ್ರಿಗಳು ಎನ್‌ಸಿಡಿಸಿ ಕಾರ್ಯಕ್ರಮದ ಯೋಜನೆ ಏನು ಮಾಡಿದ್ದಾರೆ, ಅದರ ಬಗ್ಗೆ ಹೇಳಿದ್ದಾರೆ. ಎನ್‌ಸಿಡಿಸಿ ಜೊತೆಗೆ ಎನ್‌ಡಿಡಿಬಿ, ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡಿನವರು ಸಹಾ ನಮ್ಮ ರಾಜ್ಯದಲ್ಲಿ ಇರತಕ್ಕಂತಹ ಈ ಹಣ್ಣು ಮತ್ತು ತರಕಾರಿಗಳ ಮಾರುಕಟ್ಟೆ ವ್ಯವಸ್ಥೆಯನ್ನು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ಇದೇ ತಿಂಗಳು 7ನೇ ತಾರೀಖಿನ ದಿವಸ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಸಭಾನಾಯಕರೇ, ರೈತರ ಪರವಾಗಿ ನಾವು ಸಭಾತ್ಯಾಗ ಮಾಡುತ್ತೇವೆ, ರೈತರಿಗೆ ಪರಿಹಾರ ಕೊಡದೇ ಹೋದರೆ, ಇದು ಸರಿ ಇಲ್ಲ. ಇದು....

(ಗೊಂದಲ)

ಶ್ರೀ ಸಿ. ಬೈರೇಗೌಡ : ಸ್ವಾಮಿ ಉಪಾಧ್ಯಕ್ಷರೇ, ಇದೇ ತಿಂಗಳು 7ನೇ ತಾರೀಖಿನ ದಿವಸ ಅಧ್ಯಕ್ಷರು ಬರುತ್ತಾ ಇದ್ದಾರೆ, ನಾವು ದೀರ್ಘಕಾಲಿಕ ಕಾರ್ಯಕ್ರಮಗಳನ್ನು ಕೂಡ ಹಾಕುತ್ತಾ ಇದ್ದೇವೆ.

ಶ್ರೀ ಹೆಚ್. ಶಿವಪ್ಪ : ಪರಿಹಾರ ಕೊಡುವುದಕ್ಕೆ ಸಾಧ್ಯ ಇದೇ ಎಂದು ಹೇಳಿ, ಇಲ್ಲಾ ಪರಿಹಾರ ಕೊಡುವುದಕ್ಕೆ ಸಾದ್ಯವಿಲ್ಲವೆಂದು ಹೇಳಿ.

(ಗೊಂದಲ)

ಉಪಾಧ್ಯಕ್ಷರು : ಆಯಿತು ನೀವು ಮಾತನಾಡಿ.

(ಗೊಂದಲ)

ಅಲ್ಲ, ನೀವು ಮಾತನಾಡುವಾಗ ಅವರು ಸುಮ್ಮನೆ ಕುಳಿತಿದ್ದರು, ಆದರೆ ನೀವು, ಅವರು ಮಾತನಾಡುವುದನ್ನು ಕೇಳುವುದಕ್ಕೆ ತಯಾರು ಇಲ್ಲ. ನೀವೇನು ಈ ರೀತಿ ಮಾಡುತ್ತೀರಲ್ಲಾ? ನೀವು ಪದೇ ಪದೇ ಎದ್ದು ನಿಂತು ಈ ರೀತಿ ಏಕೆ ತೊಂದರೆ ಕೊಡುತ್ತೀರಿ? ನೀವು ಏನೇ ಮಾತನಾಡಿದರೂ ರೆಕಾರ್ಡಗೆ ಹೋಗುವುದಿಲ್ಲ. ಏಕೆ ಈ ರೀತಿ ಮಾತಾಡುತ್ತಿರೀ?

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುನಿಯಪ್ಪನವರು ನಾನು ರಾಜೀನಾಮೆ ಕೊಡಬೇಕೆಂದು ಹೇಳಿದರು. ಏಕೆ ಸ್ವಾಮಿ ನಾನು ರಾಜೀನಾಮೆ ಕೊಡಬೇಕು? ಇವತ್ತು ರಾಜ್ಯದಲ್ಲಿ ನಾನು ಕೃಷಿ ಮಂತ್ರಿ ಆದಮೇಲೆ ಆಹಾರ ಧಾನ್ಯಗಳು 85 ಲಕ್ಷ ಟನ್ ಇದ್ದದ್ದನ್ನು 96-97ನೇ ಸಾಲಿನಲ್ಲಿ 87.02 ಲಕ್ಷ ಟನ್ಸ್ ಅಷ್ಟು ನಾವು ಆಹಾರ ಧಾನ್ಯವನ್ನು ಉತ್ಪತ್ತಿ ಮಾಡಿದ್ದೇವೆ. ಈ ವರ್ಷ 90 ಲಕ್ಷ ಟನ್ ಆಹಾರ ಧಾನ್ಯವನ್ನು ನಾವು ಉತ್ಪಾದನೆ ಮಾಡಬೇಕಾಗಿತ್ತು. ಆದರೆ 91 ಲಕ್ಷ ಟನ್ ಆಹಾರ ಉತ್ಪಾದನೆಯಾಗಿದೆ. ಇವತ್ತು ಆಲೂಗಡ್ಡೆ ಅಥವಾ ಮತ್ತೊಂದು ಬೆಳೆ ಹೆಚ್ಚಾಗಿರುವುದರಿಂದ ಸರ್ಕಾರ ಕೆಲವು ತೀವ್ರವಾದಂತಹ ಕ್ರಮಗಳನ್ನು ತೆಗೆದುಕೊಂಡಿರುವುದರಿಂದ ಇವತ್ತು ಹೆಚ್ಚಿಗೆ ಉತ್ಪಾದನೆಯಾಗಿರುವುದು. ಹೆಚ್ಚಿಗೆ ಉತ್ಪಾದನೆ ಆಗಿರುವುದರಿಂದ ನಾವು ರಾಜೀನಾಮೆ ಕೊಟ್ಟು ಹೋಗಬೇಕೆಂತೆ. ಆದರೆ ನಾವು ಇಲ್ಲಿಗೆ ರಾಜೀನಾಮೆ ಕೊಟ್ಟು ಹೋಗುವುದಕ್ಕೆ ಬಂದಿಲ್ಲ, ರೈತರ ಹಿತವನ್ನು ಕಾಪಾಡುವುದಕ್ಕೆ ಬಂದಿರುವುದು. ನಾವು ಶಕ್ತಿ ಮೀರಿ ರೈತರ ಹಿತವನ್ನು ಕಾಪಾಡುತ್ತೇವೆ. ಆದ್ದರಿಂದ ರಾಜೀನಾಮೆ ಕೊಡತಕ್ಕಂತಹ ಸಂದರ್ಭ ಬಂದಿಲ್ಲ, ಅಂತಹದ್ದು ಏನು ನಡೆದಿಲ್ಲ. ಅದರಿಂದ ರಾಜೀನಾಮೆ ಕೊಡುವುದಕ್ಕೆ ಸಾಧ್ಯವಿಲ್ಲ, ಎಂಬ ಮಾತನ್ನು ಮಾನ್ಯ ಉಪಾಧ್ಯಕ್ಷರೆ ತಮಗೆ ತಿಳಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಅವರು ಹೇಳುತ್ತಾರೆ ಎಂದು ನಾವು ರಾಜೀನಾಮೆ ಕೊಟ್ಟು ಬಿಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲ, ನಿಮ್ಮ ಮನೆಯಿಂದ ಏನಾದರೂ ಕೊಡುತ್ತೀರಾ? ಕೇಳುತ್ತಾರಂತ ಕೊಟ್ಟುಬಿಡಬೇಕಂತೆ, ಅಂದರೆ ಏನರ್ಥ? ಇದು ಸರ್ಕಾರದ ಕರ್ತವ್ಯ. ಯಾವಾಗ ಸಾಮಾನ್ಯ ಜನ ಕಷ್ಟದಲ್ಲಿ ಇರುತ್ತಾರೋ ಆಗ ಜನರ ಕಷ್ಟಕ್ಕೆ ನೀವು ಬರಬೇಕಾಗುತ್ತದೆ, ಕಷ್ಟವನ್ನು ನಿವಾರಣೆ ಮಾಡುವುದಕ್ಕೆ. ಆದರೆ ಅದು ಬಿಟ್ಟು, ಇವರು ಕೇಳುತ್ತಾರೆ ಎಂದು ನಾವು ಕೊಡಬೇಕೋ ಎಂದು ಕೇಳಿದರೆ ಏನರ್ಥ? ಏಕೆ ಹಿಂದೆ ಏನೂ ಕೊಟ್ಟಿಲ್ಲವ? ಅನೇಕ ಸಾರಿ ಬೆಳೆ ನಾಶ ಆಗಿದ್ದಾಗ ಕೊಟ್ಟಿದ್ದಾರೆ. ಈ ಸಾರಿ ತೊಂದರೆಯಲ್ಲಿ ಇದ್ದಾಗ you have to come to their rescue. ಅದನ್ನು ಬಿಟ್ಟು ನೀವು ಕೇಳಿದ್ದೆಲ್ಲಾ ಸರಿ ಎಂದು..

ಶ್ರೀ ಹೆಚ್. ಶಿವಪ್ಪ : ನಾವು 1995-96ನೇ ಇಸವಿಯಲ್ಲಿ ಕಬ್ಬನ್ನು ಸುಟ್ಟಿದ್ದೇವೆ, ಅದಕ್ಕೇನಾದರೂ ಸಪೋರ್ಟ್ ಪ್ರೈಸ್ ಕೊಟ್ಟಿರಾ? ಕಾಂಗ್ರೆಸ್‌ಸರ್ಕಾರದಲ್ಲೂ ಸಹ ಇಂತಹ ಪರಿಸ್ಥಿತಿ ಉದ್ಭವ ಆಗಿತ್ತು, ಆಗ ಏನಾದರೂ ಕೊಟ್ಟಿದ್ದಾರಾ? ಈಗ ಇಲ್ಲಿ ಕುಳಿತಾಗ ಹೇಳುವುದೇ ಒಂದು, ಅಲ್ಲಿ ಕುಳಿತಾಗ ಹೇಳುವುದೇ ಒಂದು. ಇದು ವಿಪರ್ಯಾಸ This is an irony of you people;

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು : ಏನು ಟೊಮ್ಯಾಟೋ ಮೇಲೆ ಬಹಳ ಹೊತ್ತು ಚರ್ಚೆ ಮಾಡುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಟೊಮ್ಯಾಟೊ ವಿಷಯದಲ್ಲಿ ಎಲ್ಲರೂ ಬಹಳ ಹೊತ್ತು ಮಾತನಾಡಿದರು. ಆ ಕಡೆ ಮೂರು ನಾಲ್ಕು ಜನ ಮಾತನಾಡಿದರು. Naturally it took time.

ಅಧ್ಯಕ್ಷರು : ಅಲ್ಲ ಶೂನ್ಯ ವೇಳೆಯಲ್ಲಿ ಮೆನ್ಷನ್ ಮಾಡುವುದಕ್ಕೆ ಅಂತ ಬಿಟ್ಟರೆ!

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ಉತ್ತರ ಕೊಡುವುದಕ್ಕೆ ಏನಾಯಿತು ಎಂದರೆ ಸನ್ಮಾನ್ಯ ಬೈರೇಗೌಡರು ಉತ್ತರ ಕೊಟ್ಟರು, ತೋಟಗಾರಿಕೆ ಮಂತ್ರಿಗಳು ಉತ್ತರ ಕೊಟ್ಟರು, ಮುಖ್ಯಮಂತ್ರಿಗಳು ಉತ್ತರ ಕೊಟ್ಟರು ಹಾಗಾಗಿ ಇಟ್ ಟುಕ್ ಟೈಂ.

ಅಧ್ಯಕ್ಷರು : ಆಯಿತು, ನೀವು ಪ್ರಸ್ತಾಪ ಮಾಡಿ. ಹೀಗಾದರೆ ನಾಳೆಯಿಂದ ಸದನ ನಡೆಸುವುದಾದರೂ ಹೇಗೆ? ಡಿಮ್ಯಾಂಡ್ಸ್ ಮೇಲೆ ಡಿಸ್ಕ್ಷನ್ ಆಗುವುದಿಲ್ಲ. ನಾಳೆ ಬೆಳಿಗ್ಗೆ ಮಿನಿಸ್ಟರ್ ಕನ್‌ಸರನ್ ನೀವು ಉತ್ತರ ಕೊಡಬೇಕಾಗುತ್ತದೆ. ಫಸ್ಟ್ ರಿಪ್ಲೈ ಆಮೇಲೆ I am taking up question hour.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಳೇ ಅಟ್‌ಲೀಸ್ಟ್ ಇವರ ಜೊತೆ ಆ ವಿಷಯದ ಬಗ್ಗೆ ಮಾತನಾಡಬೇಕಲ್ಲ?

ಅಧ್ಯಕ್ಷರು : ಯಾವಾಗ ಮಾತನಾಡುತ್ತೀರಿ? ಕಾವೇರಿ ನದಿ ನೀರಿನ ಚರ್ಚೆ ಬಗ್ಗೆ ನೀವು ಇವತ್ತು ಕುಳಿತುಕೊಳ್ಳೋಣ ಎಂದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ನಾಳೆ ಏನಾದರೂ ಮಾತನಾಡಬೇಕು. ಏಕೆಂದರೆ ಆ ಎರಡೂ ಡಿಮ್ಯಾಂಡ್ ಇಂಪಾರ್ಟೆಂಟ್ ಡಿಮ್ಯಾಂಡ್. ಅದರ ಬಗ್ಗೆ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ನಾಳೆ ಮಧ್ಯಾಹ್ನದ ಮೇಲೆ ವೀರಪ್ಪನ್‌ದು ಇದೆ.

ಅಧ್ಯಕ್ಷರು : ವೀರಪ್ಪನ್‌ದು ಆದರೂ ಬರಲಿ, ಯಾರಾದರೂ ಬರಲಿ ನನಗೆ ಏನು ತಕರಾರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ತಾವೇ ಮಂಗಳವಾರ ತೆಗೆದುಕೊಳ್ಳೋಣ ಎಂದು ಹೇಳಿದಿರಿ.

ಅಧ್ಯಕ್ಷರು : ಹೌದು ಹೇಳಿದ್ದೀನಿ, ಇಲ್ಲಾ ಎಂದು ಹೇಳಲಿಲ್ಲವಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಪ್ರಕಾರ ನಾನು ಕೇಳುತ್ತಾ ಇದ್ದೇನೆ.

ಅಧ್ಯಕ್ಷರು : ಈ ತೋಟಗಾರಿಕೆ ವಿಷಯದ ಬಗ್ಗೆ ಹೇಳುತ್ತಾ ಇದ್ದರಲ್ಲಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾನು ಪ್ರಸ್ತಾಪ ಮಾಡತಕ್ಕಂಥದ್ದು ತೋಟಗಾರಿಕೆ ಹಗರಣ.

ಮಾನ್ಯ ಸದಸ್ಯರು : ನಾಳೆ ತೆಗೆದುಕೊಳ್ಳಿ ಎಲ್ಲಾ ಒಂದೇ ದಿನ ತೆಗೆದುಕೊಳ್ಳುವುದು ಬೇಡ.

ಅಧ್ಯಕ್ಷರು : ನೆಕ್ಸ್ಟ್ ಕಾಲಿಂಗ್ ಅಟೆನಷನ್, ಕಾಲಿಂಗ್ ಅಟೆನ್‌ಷನ್ ಬರುತ್ತಾ ಎಂದು ಗೃಹಮಂತ್ರಿಗಳು ಕೇಳಿದರು, ಅದಕ್ಕೆ ಇದು ಮುಗಿದ ತಕ್ಷಣ ಕಾಲಿಂಗ್ ಅಟೆನ್‌ಷನ್ ಎಂದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾನು ತೆಗೆದುಕೊಳ್ಳಬಹುದಾ?

ಅಧ್ಯಕ್ಷರು : ತೆಗೆದುಕೊಳ್ಳಿ.

ತೋಟಗಾರಿಕೆ ಇಲಾಖೆಯಲ್ಲಿ ಅವ್ಯವಹಾರ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಡಿವಿಷನ್‌ನಲ್ಲಿ ಈ ತೋಟಗಾರಿಕೆ ಇಲಾಖೆಯಲ್ಲಿ ಹೆಚ್ಚು ಕಡಿಮೆ ಸುಮಾರು 15ರಿಂದ 20 ಕೋಟಿ ರೂಪಾಯಿಗಳವರೆಗೆ ಮೋಸ ನಡೆದಿದೆ ಎನ್ನತಕ್ಕಂಥದ್ದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಬಿಹಾರದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಫಾಡರ್ ಸ್ಕ್ಯಾಂ ನಡೆದಿದೆ. ಆದರೆ, ಈ ತೋಟಗಾರಿಕೆ ಇಲಾಖೆಯಲ್ಲಿ 15ರಿಂದ 20 ಕೋಟಿ ರೂಪಾಯಿಗಳವರೆಗೆ ಅವ್ಯವಹಾರ ನಡೆದಿದೆ ಎಂದರೆ ಇದು ಒಂದು ಆಶ್ಚರ್ಯ ಉಂಟುಮಾಡತಕ್ಕಂತಹ ಸಂಗತಿ. ಇದಕ್ಕ ಕಾರಣ ಕರ್ತರಾದಂತಹ ಶ್ರೀಮಾನ್ ಯು.ಪಿ. ಚೌದರಿ, ಇವರು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಮತ್ತು ಪಂಡಿತ್ ನೂಲಾ, ಅಸಿಸ್ಟೆಂಟ್ ಡೈರೆಕ್ಟರ್, ನಾರಾಯಣ್‌ಪುರ್, ನಂತರ ಶ್ರೀಮಾನ್ ಸಿದ್ದಕ್ಕಿ, ಇವರೆಲ್ಲರೂ ಸೇರಿಕೊಂಡು ಈ ಒಂದು ಹೆಚ್ಚಿನ ಹಣವನ್ನು, ಅಂದರೆ ಗ್ರಾಂಟ್ ಎಷ್ಟು ಇದೆ,